ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ಶಿಬಿರ

ನಿರುದ್ಯೋಗ ಸಮಸ್ಯೆ

ಭಾರತದಲ್ಲಿ ಕೋಮುವಾದ

ಧ್ಯಾನ ಮತ್ತು ಕರ್ಮ

ಸಂಪುಟ : ೧೧ ಜುಲೈ ೧೯೯೦ ಸಂಚಿಕೆ : ೧

ಈ ಸಂಚಿಕೆಯಲ್ಲಿ

ಸಹಕರಿಸಲು ಬಿನ್ನಹ-

ಮುದ್ರಣ ವೆಚ್ಚ, ಕಾಗದದ ವೆಚ್ಚ ಹೆಚ್ಚಿರುವ ಕಾರಣ "ಜನಪದ ವಿಚಾರ"ದ ವಾರ್ಷಿಕ ಚಂದಾವನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ.

ಜುಲೈ ೧೯೮೦ ರ ಸಂಚಿಕೆಯಿಂದ ವಾರ್ಷಿಕ ಚಂದಾ ರೂಪಾಯಿ ಇಪ್ಪತ್ತೈದು [ರೂ. 25-00] ದಯವಿಟ್ಟು ಸಹಕರಿಸಬೇಕಾಗಿ ವಿನಂತಿ.

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧ ಮೇಲುಕೋಟೆ. ಜುಲೈ ೧೫, ೧೯೯೦ ಸಂಚಿಕೆ ೧

ನಿಮ್ಮೊಂದಿಗೆ........

ಮಳೆ! ಎಂಥಾ ವಿಚಿತ್ರ ಅದು. ಕಾದಿದ್ದೇ ಕಾದಿದ್ದು. ಕಾದ ನೆಲ ಗಾರೆದ್ದು, ಬಿತ್ತಿದ ಎಳ್ಳು, ಜೋಳ, ನಾಟಿಗೆಕಾದ ರಾಗಿ ಒಣಗಿ ಹೋಯಿತು. ಜತೆಗೇ ಕುಟುಕು ಜೀವ ಇಟ್ಟುಕೊಂಡಿದ್ದ ಆಸೆಯೂ.

ಕರಾವಳಿಯಲ್ಲಿ ಉಧೋ ಎಂದು ಸುರಿಯುವ ಮಳೆ ಘಟ್ಟ ದಾಟಿ ಈ ಕಡೆ ಬಾರನೆನ್ನುತ್ತೆ. ಇಲ್ಲೋ ಗಾಳಿ ಬೀಸಿದಲ್ಲಿಗೆ ಹೋಗಿ ಸುರಿಯುವ ಮಳೆಗೆ ದಿಕ್ಕೂ ಇಲ್ಲ, ದಯೆಯೂ ಇಲ್ಲ. 'ಕ್ಷೌರದಂಗಡಿಯ ಸ್ಪ್ರೇ' ಎಂದು ಹೊಸ ಜೀವನ ದಾರಿಯ ಡೇವಿಡ್ ಗೊಣಗುತ್ತಾನೆ.

ಪ್ರತೀ ವರ್ಷವೂ ಏನಾದರೊಂದು ಪ್ರಯೋಗದ ಕನಸು ಕಾಣುವ ಸಂತೋಷನ ಇನ್ನೊಂದು ಕನಸು ಒಡೆಯುತ್ತದೆ. ಆತನನ್ನು ಕಂಡಾಗಲೆಲ್ಲ ಭೇತಾಳದ ಬೆನ್ನು ಹತ್ತುವ ತ್ರಿವಿಕ್ರಮನ ನೆನಪಾಗುತ್ತದೆ. ಒಂದೆಡೆ ಚಂಚಲ ಮಳೆ, ಇನ್ನೊಂದೆಡೆ ಅರೆ ಬರಡು ಭೂಮಿ.

ಆದರ್ಶ ಗಟ್ಟಿಯಾಗುವುದು, ಕೃಶವಾಗುವುದು ಒಂದೇ ಭೂಮಿಕೆಯಲ್ಲಿ. ನಾವು ನೋಡುವ ದೃಷ್ಟಿ, ಮಾನಸಿಕ ದೃಢತೆಯ ಮೇಲೆ ಅದು ನಿಂತಿದೆ. ಈ ದೇಶದಲ್ಲಿ ಭೂಮಿ ನೆಚ್ಚಿ ಬಾಳುತ್ತೇನೆ ಎಂಬ ಕನಸನ್ನು ಛಿದ್ರಗೊಳಿಸಲು ಮಳೆಯ ಅವಾಂತರಕಾರಿ ವರ್ತನೆ ಸಾಕು.

ಸುಸ್ತಾದ ರೈತ ಬೀಡಿ ಸೇದುತ್ತಾನೆ, ಕುಡಿಯುತ್ತಾನೆ. ಬೇಸಿಗೆಯಲ್ಲಿ ಒಂದು ಹುಲ್ಲು ಕಡ್ಡಿಯೂ ಇರದ ಭೂಮಿ ನೋಡುತ್ತಾ ಯಾರು ಕೂತಾರು? ಕೆಲಸಕ್ಕೆ ಬಾರದ ಕಾಡು ಹರಟೆಗಳಲ್ಲಿ ದಿನ ದೂಡದೆ ಇನ್ನೇನು ತಾನೇ ಅಲ್ಲಿ ಮಾಡಲುಂಟು?

ಶಿಕ್ಷಣವು ಪಟ್ಟಣದ ಮೋಜಿನ ಬದುಕಿಗೆ ಪ್ರವೇಶ ನೀಡುವ ಪಾಸ್ ಪೋರ್ಟ್ ಅಲ್ಲಂ ಜನರ ಸೇವೆಗೆ ಬದುಕು ಮುಡುಪಿಡಬೇಕಾದ ಪವಿತ್ರ ತರಬೇತಿಯೋ ? ಇಂದು ಈ ದೇಶದಲ್ಲಿ ಏನಾಗುತ್ತಿದೆ ಎಂದರೆ ಕಾಲೇಜು ಶಿಕ್ಷಣ ಪಡೆದ ಯುವಕನನ್ನು ಥಳುಕಿನ ಮಾಯಾಪುರಿ ಮುಂಬಯಿ ಸೆಳೆಯುತ್ತದೆ. ಅಲ್ಲಿ ಮೋಜು ಮಾಡುತ್ತಿರುವ ನೂರಾರು ಜನರ ಕ್ಲಬ್ಬಿಗೆ ಈ ಡಿಗ್ರಿ ಹೋಲ್ಡರ್ ಕೂಡಾ ಸೇರುತ್ತಾನೆ. ಈ ಮಂದಿ ತಮ್ಮ ಸಂಬಳ ಸಾರಿಗೆ ಅನುಕೂಲಗಳಿಗೆ ಉಳಿದ ಕೋಟಿಗಟ್ಟಲೆ ಬಡವರಿಂದ ಅಪಾಯ ತಟ್ಟೀತು ಎಂದು ನಿತ್ಯ ಶಂಕಿಸುತ್ತಾ, ಅವರಿಂದ ರಕ್ಷಣೆ ಪಡೆಯಲು ಒಂದು ಅಭೇದ್ಯ ಕೋಟೆ ನಿರ್ಮಿಸಿಕೊಳ್ಳುತ್ತಾರೆ.

ಈಗ ಇನ್ನೊಂದು ಸಾಧ್ಯತೆ – ಡಿಗ್ರಿ ಪಡೆದ ಯುವಕನನ್ನು ಮರಳಿ ಹಳ್ಳಿಗೆ ಸೆಳೆಯುವಂಥಾದ್ದು. ಪ್ರತ್ಯಕ್ಷವಾಗೋ ಪರೋಕ್ಷವಾಗೋ ಈ ದೇಶದ ಬಡ ಹಳ್ಳಿಗರು ತನ್ನ ವಿದ್ಯಾಭ್ಯಾಸಕ್ಕೆ ಬೇಕಾದ ಬೆಲೆ ತೆತ್ತಿದ್ದಾರೆ, ಆ ಋಣ ಮುಕ್ತಿಗಾದರೂ ಅವರಿಗೆ ಏನಾದರೂ ಸೇವೆ ಸಲ್ಲಿಸಬೇಕು ಎಂದು ಓದಿದ ಯುವಕನೊಬ್ಬನಿಗೆ ಅನ್ನಿಸಬೇಕು.

ಇಂದು ಶಿಕ್ಷಣ ಪಡೆದವರು ಬಡಹಳ್ಳಿಗರ ನೆರಳೇ ಸೋಂಕದಂತೆ ದೂರವಿದ್ದು ಬಿಡುತ್ತಾರೆ. ಕೈಕೆಸರಾಗುವ ದೇಹದುಡಿಮೆಯ ಬಗ್ಗೆ ಹೇಸಿಗೆ ಪಡುತ್ತಾರೆ. ಜನ ಸಮುದಾಯದ ಸೇವೆ ತಮ್ಮ ಪವಿತ್ರ ಕರ್ತವ್ಯ ಎಂಬುದನ್ನು ಶಿಕ್ಷಿತ ಯುವಕರು ಅರಿತುಕೊಳ್ಳುವವರೆಗೆ ಈ ದೇಶದ ಸಮಸ್ಯೆಗಳು – ನಿರುದ್ಯೋಗವೂ ಸೇರಿದಂತೆ – ನಿವಾರಣೆಯಾಗುವುದಿಲ್ಲ. ಕನಿಷ್ಠ ನೂರುಮಂದಿ ಹಳ್ಳಿಗರ ಪುರೋಭಿವೃದ್ಧಿಗೆ ಇಬ್ಬರು ವಿದ್ಯಾವಂತರನ್ನು ನೇಮಿಸುವ ಒಂದು ಯೋಜನೆ ಹಾಕಿಕೊಂಡರೂ, ಈ ದೇಶದ ಎಲ್ಲಾ ವಿದ್ಯಾವಂತರೂ ಈ ಕೆಲಸಕ್ಕೆ ಬಳಕೆಯಾಗುತ್ತಾರೆ. ಎಷ್ಟು ಜನ ವಿದ್ಯಾವಂತರು ಇಂಥಾ ಸಾಮಾಜಿಕ ಉದ್ದಿಶ್ಯಕ್ಕೆ ತಯಾರಾಗಿದ್ದಾರೆ ?

ಸ್ವಾರ್ಥ ಸಾಧನೆಯ ಖುಷಿ ತ್ಯಾಗದಲ್ಲಿ ಇರುವುದಿಲ್ಲ.

ನನಗನ್ನಿಸುವಂತೆ ತಕ್ಷಣ ಭಾರತದಲ್ಲಿ ಕನಿಷ್ಠ ೫ ಕೋಟಿ ಜನಕ್ಕೆ ಉದ್ಯೋಗದ ಅವಶ್ಯಕತೆ ಇದೆ ಅನ್ನಿಸುತ್ತೆ. ಈ ಪ್ರಮಾಣದ ಉದ್ಯೋಗಾವಕಾಶ ನಿರ್ಮಿಸಲು ಬೇಕಾದ ಆರ್ಥಿಕ ಬಂಡವಾಳದ ಬಗ್ಗೆ ಯೋಚಿಸೋಣ. ೨೦೦ ರೂಪಾಯಿ ಎಂದಿಟ್ಟುಕೊಂಡರೆ ೧೦೦ ಕೋಟಿ ರೂಪಾಯಿ ಬೇಕಾಗುತ್ತದೆ. ೨೦೦೦ ರೂಪಾಯಿ ಎಂದರೆ, ೧೦೦೦೦ ಕೋಟೀ ರೂ. ಬೇಕಾಗುತ್ತದೆ, ಹೀಗೆ. ಭಾರತದ ರಾಷ್ಟ್ರೀಯ ಆದಾಯವನ್ನು ಗಮನದಲ್ಲಿಟ್ಟುಕೊಂಡು ೧೦ ವರ್ಷಗಳ ಕಾಲ ಮಿತಿ ಹಾಕಿಕೊಳ್ಳೋಣ. ವಾರ್ಷಿಕ ಆದಾಯದ ಶೇ. ೫ ರಷ್ಟನ್ನು ಕಲ್ಪಿಸಿಕೊಂಡರೂ ೧೦ ವರ್ಷಕ್ಕೆ ೧೫ ಸಾವಿರ ಕೋಟಿ ರೂಪಾಯಿ ಹೂಡಬಹುದು. ಅಂದರೆ ಒಂದು ಉದ್ಯೋಗ ಸೃಷ್ಟಿಗೆ ೩ ಸಾವಿರ ರೂ. ನಂತೆ. ಈ ಲೆಕ್ಕದಂತೆ ವರ್ಷಕ್ಕೆ ೫೦ ಲಕ್ಷ

ಜನಕ್ಕೆ ಉದ್ಯೋಗ ಸೃಷ್ಟಿಸಬಹುದು. ಮೂರು ಸಾವಿರ ಸಾಲದು, ಮೂವತ್ತು ಸಾವಿರ ಬೇಕೆಂದರೆ ಕೇವಲ ೫ ಲಕ್ಷ ಜನಕ್ಕೆ ಉದ್ಯೋಗ ನೀಡಬಹುದು. ಇಲ್ಲವೆ, ಅತ್ಯುತ್ತಮ ತಂತ್ರಜ್ಞಾನ ಬೇಕು ಎಂದು ವಾದಿಸಿ ಬಂಡವಾಳ ಕನಿಷ್ಠ ೩ ಲಕ್ಷ ರೂಪಾಯಿಗಳೆಂದರೆ ಕೇವಲ ೫೦ ಸಾವಿರ ಜನಕ್ಕೆ ಉದ್ಯೋಗ ಕಲ್ಪಿಸಬಹುದು.

ಇಂಥಾ ಪರಿಸ್ಥಿತಿಯಲ್ಲಿ ಭಾರತ ನಿರ್ಧರಿಸಬೇಕಾದ ನಿರ್ಣಾಯಕ ಅಂಶವೆಂದರೆ ನಮಗೆಂಥಾ ತಂತ್ರಜ್ಞಾನ ಬೇಕು ಎಂಬುದೇ ಆಗಿದೆ. ನಾವು ಈ ಎರಡರ ಲ್ಲೊಂದನ್ನು ಆರಿಸಿಕೊಳ್ಳಬೇಕಾಗುತ್ತದೆ.

೧ ಕಡಿಮೆ ಬಂಡವಾಳ, ಹೆಚ್ಚು ಉದ್ಯೋಗದ ಸಾಧ್ಯತೆ.

೨ ಹೆಚ್ಚು ಬಂಡವಾಳ, ಕಡಿಮೆ ಉದ್ಯೋಗಾವಕಾಶ.

ಈಗ ನಮ್ಮ ಆಯ್ಕೆ ಪ್ರೇರಣೆ, ವಿದ್ಯಾಭ್ಯಾಸ, ತಂತ್ರಜ್ಞಾನ ಇವು ಮೂರನ್ನು ತೆಕ್ಕೆ ಬಿಗಿಯುತ್ತದೆ.

ಯಾವುದೇ ಶಿಕ್ಷಣದ ಬಳಿಕ ಏನಾದರೂ ಸಾರ್ಥಕ ಸೇವೆ, ಬದುಕಿನ ಭರವಸೆ ಇಲ್ಲದಿದ್ದರೆ ಇಂಥಾ ದೈತ್ಯ ಶೈಕ್ಷಣಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದರಲ್ಲಿ ಅರ್ಥ ವಿಲ್ಲ, ಅಂದರೆ ನಾವು ಕನಿಷ್ಠ ವಾರ್ಷಿಕ ೫೦ ಲಕ್ಷ ಉದ್ಯೋಗಾವಕಾಶಗಳ ಬಗ್ಗೆ ಚಿಂತಿಸಬೇಕೇ ಹೊರತು ಕೆಲವು ಸಾವಿರ ಉದ್ಯೋಗಗಳ ಬಗ್ಗೆ ಅಲ್ಲ.

ಈಗ ತಂತ್ರಜ್ಞಾನದ ಬಗ್ಗೆ ನೋಡೋಣ. ೧೯೦೩ ನೇ ಇಸವಿಯಲ್ಲಿ ಫೋರ್ಡ್ ಕಂಪನಿಗೆ ಮೊದಲ ಕಾರು ನಿರ್ಮಿಸಲು ನಾಲ್ಕು ತಿಂಗಳು ಬೇಕಾದವು. ತಲಾ ಬಂಡ ವಾಳ ಮುನ್ನೂರು ಡಾಲರೂ ಇರಲಿಲ್ಲ. ೧೯೬೩ ರಲ್ಲಿ ಹೊಸ ಕಾರಿನ ಮಾದರಿ ಯೊಂದನ್ನು ಬಿಡುಗಡೆ ಮಾಡಿದಾಗ, ಅದಕ್ಕೆ ತಗಲಿದ ಸಂಶೋಧನಾ ವೆಚ್ಚ ೬೦ ಕೋಟಿ ರೂಪಾಯಿ. ಕಾಲಾವಧಿ ಮೂರು ವರ್ಷ. ಪ್ರಥಮ ಕಾರಿನ ಉತ್ಪಾದನೆಯಲ್ಲಿ ಇಡೀ ಕಾರನ್ನು ಒಂದು ಹಂತದಲ್ಲಿ ಜೋಡಿಸಲಾಗುತ್ತಿತ್ತು. ಅರುವತ್ತು ವರ್ಷ ಗಳ ಬಳಿಕ ಈ ಉತ್ಪಾದನಾ ವಿಧಾನ ಅದೆಷ್ಟು ಸಂಕೀರ್ಣಗೊಂಡಿತ್ತೆಂದರೆ ಒಂದು ನಟ್ಟು ಬೋಲ್ಟ್‌ಗಳ ಜೋಡಣೆಗೂ ಒಂದೊಂದು ಹಂತ ನಿರ್ಮಿತವಾಗಿತ್ತು. ಇಡೀ ಸಂಘಟನೆ ಹೇಗಿತ್ತೆಂದರೆ ಯಾವೊಬ್ಬನೂ ತಾನು ಪರಿಣತಿ ಪಡೆದ ಕಾರ್ಯಕ್ಷೇತ್ರದಿಂದಾಚೆ ಕಾರ್ಯ ನಿರ್ವಹಿಸುವುದೇ ಅಸಾಧ್ಯವೆನಿಸಿತ್ತು.

ತಂತ್ರಜ್ಞಾನ ಹೆಚ್ಚು ಸೂಕ್ಷ್ಮವಾದಷ್ಟು ಕಾರ್ಯ ವಿಧಾನ ಕ್ಲಿಷ್ಟವಾಗುತ್ತದೆ. ತಂತ್ರಜ್ಞಾನ ಜನಸಾಮಾನ್ಯರ ಕೈಗೆಟುಕದ ನಕ್ಷತ್ರವಾಗುತ್ತದೆ. ಇಂಥಾ ಆಧುನಿಕ ಯಂತ್ರ ನಾಗರಿಕತೆಯ ಪ್ರಪಂಚದಲ್ಲಿ ಬಡವರು ನಿರಂತರವಾಗಿ ಶ್ರೀಮಂತರನ್ನು ಅವಲಂಬಿಸಬೇಕಾಗುತ್ತದೆ. ಶ್ರೀಮಂತರ ಬಂಡವಾಳಶಾಹಿಗಳ ಕೈಕೂಲಿಗಳಾಗಿ ಬಡವರು ಬದುಕಬೇಕಾಗುತ್ತದೆ. ಆದ್ದರಿಂದಲೇ ಶ್ರೀಮಂತ ವಾಚ್ ಕಂಪನಿಗಳು

ಗಳೂ, ಘಜನಿ ಮಹಮದ್, ಘೋರಿ ಮಹಮ್ಮದ್‌ರಂಥಾ ಖಳರೂ ಆಗಿಹೋಗಿದ್ದಾರೆ. ಇನ್ನೊಂದೆಡೆ ಅಕ್ಬರ, ದಾರಾ ಶೀಕೋ, ಟೀಪೂರಂಥವರೂ ಇದ್ದಾರೆ.

ಟೀಪೂ ಬಗ್ಗೆ ಹೆಚ್ಚೆಚ್ಚು ಓದಿದಷ್ಟೂ ಅವನ ವ್ಯಕ್ತಿತ್ವದ ಬಗ್ಗೆ ಹೆಚ್ಚೆಚ್ಚು ಗೌರವ ಹುಟ್ಟುತ್ತದೆ. ಟೀಪೂಗೆ ಇಬ್ಬರೂ ಶಿಕ್ಷಕರಿದ್ದರು. ಒಬ್ಬ ಪಂಡಿತ್ ಗೋವರ್ಧನ, ಇನ್ನೊಬ್ಬ ಮೌಲ್ವಿ ಒಬೈದುಲ್ಲಾ. ಆತನ ಪ್ರಧಾನಿ ಪೂರ್ಣಯ್ಯ, ಸೇನಾಧಿಪತಿ ಕೃಷ್ಣರಾವ್. ಟೀಪೂ ೧೫೬ ದೇವಸ್ಥಾನಗಳಿಗೆ ದತ್ತಿ ಬಿಟ್ಟಿದ್ದನು. ಆತನ ಇಷ್ಟದೈವ ಶ್ರೀರಂಗನಾಥ. ಒಮ್ಮೆ ಶೃಂಗೇರಿ ಜಗದ್ಗುರುಗಳನ್ನು ತಾನು ಅವಮಾನಿಸಿದ್ದೇನೆಂದು ಪ್ರಾಯಶ್ಚಿತ್ತ ರೂಪವಾಗಿ ಶತಚಂಡಿ ಹೋಮ ಮಾಡಿದ್ದ ವ್ಯಕ್ತಿ ಟೀಪೂ. ಬ್ರಿಟಿಷರ ವಿರುದ್ಧ ಹೋರಾಡುತ್ತಲೇ ಸತ್ತ ಏಕ ಮಾತ್ರ ರಾಜ ಟೀಪೂ.

ಹೋರಾಟವೊಂದೇ ಟೀಪೂನ ಲಕ್ಷಣವಾಗಿರಲಿಲ್ಲ. ತನ್ನ ರಾಜ್ಯದ ಆಡಳಿತವನ್ನು ಅಭೂತಪೂರ್ವವಾಗಿ ಪುನರ್ರಚಿಸಿದ್ದ. ಪಾನನಿರ್ಬಂಧವನ್ನು ಜಾರಿಗೆ ತಂದಿದ್ದ ಟೀಪೂ ಪ್ರತಿ ನಾಲ್ಕು ಮೈಲಿಗೊಂದು ಶಾಲೆ ಸ್ಥಾಪಿಸಿದ್ದ. ಕಾವೇರಿ ತೀರದಲ್ಲಿದ್ದ ಮದ್ದುಗುಂಡಿನ ಕಾರ್ಖಾನೆಯು ಕಲ್ಮಶ ನದೀ ನೀರನ್ನು ಕಲುಷಿತಗೊಳಿಸುತ್ತದೆಂಬ ಕಾರಣಕ್ಕೆ ಅದನ್ನು ಬೇರೆಡೆ ಸ್ಥಳಾಂತರಿಸಿದ್ದ ಟೀಪೂ ಪರಿಸರವಾದಿಗಳಿಗೂ ಮೆಚ್ಚುಗೆಯಾಗಬಹುದಾದ ಹೊರೆ. ಮೈಸೂರಿನ ರೇಶ್ಮೆ, ಗಂಧ ಮತ್ತು ಮುತ್ತಿನ ಕೈಗಾರಿಕೆಗಳಿಗೆ ಹೊಸ ಚಾಲನೆ ಕೊಟ್ಟ ಟೀಪೂ, ಏಡೆನ್, ಕಛ್, ಜೆಡ್ಡಾ ಮತ್ತು ಬಸ್ರಾಗಳಲ್ಲಿ ಮಾರಾಟ ಕೇಂದ್ರಗಳನ್ನು ಸ್ಥಾಪಿಸಿದ್ದ.

ಇಷ್ಟೆಲ್ಲ ಗಾಢ ಆಡಳಿತಾತ್ಮಕ ನಿರ್ವಹಣೆಯಲ್ಲಿ ತೊಡಗಿದ್ದಾಗಲೂ ಟೀಪೂ ಓದಿನ ಹುಚ್ಚು ಬಿಟ್ಟಿರಲಿಲ್ಲ. 'ನಿನ್ನ ಮದುವೆಗೆ ಏನು ಉಡುಗೊರೆ ನೀಡಲಿ?' ಎಂದು ಹೈದರಾಲಿ ಟೀಪೂನ ಕೇಳಿದಾಗ ಗ್ರಂಥಾಲಯ ಬೇಕೆಂದು ಟೀಪೂ ಹೇಳಿದ್ದ. ದೇಶವಿದೇಶಗಳಿಂದ ಪುಸ್ತಕಗಳನ್ನು ಸಂಗ್ರಹಿಸಿದ್ದಷ್ಟೇ ಅಲ್ಲ; ಇಂಗ್ಲೀಷ್, ಫ್ರೆಂಚ್ ಭಾಷೆಗಳಲ್ಲಿದ್ದ ಪುಸ್ತಕಗಳನ್ನು ಪರ್ಶಿಯನ್ ಭಾಷೆಗೆ ಅನುವಾದಿಸುವ ಕ್ರಮಕೈಗೊಳ್ಳಲಾಗಿತ್ತು. ಟೀಪೂ ಸಾವಿನ ಬಳಿಕ ಬ್ರಿಟಿಷರು ಮಾಡಿದ ಮೊದಲ ಕೆಲಸ ಟೀಪೂನ ಅಮೂಲ್ಯ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದ್ದು.

ಟೀಪೂ ಬಗ್ಗೆ ಎಲ್ಲಕ್ಕಿಂತ ಅಚ್ಚರಿ ಹುಟ್ಟಿಸುವುದು ಆತನ ವಿಶಾಲ ದೃಷ್ಟಿಕೋನ. ಮಧ್ಯಯುಗದ ಭಾರತದ ಎಲ್ಲ ರಾಜರುಗಳಿಗಿದ್ದ ದೋಷದಿಂದ ಟೀಪೂ ಮುಕ್ತನಾಗಿದ್ದ. ಆ ರಾಜರುಗಳ್ಯಾರಿಗೂ ತಮ್ಮ ರಾಜ್ಯಕ್ಕಿಂತ ಆಚೆಗೆ ದೃಷ್ಟಿ ಹಾಯಿಸಲು ಆಗಲೇ ಇಲ್ಲ. ಎಲ್ಲ ವಿದೇಶೀ ಧಾಳಿಕೋರರಿಗೂ ಭಾರತ ಒಂದು ಏಕೀಕೃತ ಭೂಭಾಗ ಎನ್ನಿಸಿದರೂ ಈ ದೇಶದ ರಾಜರುಗಳಿಗೆ ಅದು ಅನ್ನಿಸಿರಲೇ ಇಲ್ಲ. ಜಾಗತಿಕ ದೃಷ್ಟಿ ಇದ್ದ ಏಕೈಕ ಭಾರತೀಯ ರಾಜನ ಎಂದರೆ ಟೀಪೂನೇ.

೧೦ ನೇ ಪುಟ ನೋಡಿ

ಭಾರತದಲ್ಲಿ ನಿರುದ್ಯೋಗ ಸಮಸ್ಯೆ

—ಇ. ಎಫ್. ಶುಮಖರ್

ನಿರುದ್ಯೋಗವೆಂದರೆ, ಶ್ರಮ ಶಕ್ತಿಯ ಅನುಪಯೋಗ ಎಂದೇ ಅರ್ಥ. ಪ್ರತೀ ಸಮಾಜವೂ ತನ್ನಲ್ಲಿರುವ ಶ್ರಮಶಕ್ತಿಯ ಪೂರ್ಣ ಉಪಯೋಗದತ್ತ ಚಿಂತಿಸ ಬೇಕು.

ನಿಜವಾದ ಆರ್ಥಿಕ ಪ್ರಗತಿ ಈ ಪೂರ್ಣ ಶ್ರಮಶಕ್ತಿಯನ್ನು ಪಡೆಯುವ ಕ್ರಮ. ಇದನ್ನು ಸಾಧಿಸಲು ನಾಲ್ಕು ಅಂಶಗಳು ಬೇಕಾಗುತ್ತವೆ.

೧ ಪ್ರೇರಣೆ
೨ ತಾಂತ್ರಿಕ ಜ್ಞಾನ
೩ ಬಂಡವಾಳ
೪ ಉತ್ಪನ್ನಕ್ಕೆ ತಕ್ಕ ಮಾರುಕಟ್ಟೆ

ಪ್ರಗತಿಯ ಪ್ರೇರಣೆ ಹೊರಗಿನಿಂದ ಬಂದರೆ ಉಪಯೋಗವಿಲ್ಲ. ಸಾಮಾನ್ಯ ವಾಗಿ ಆರ್ಥಿಕ ಸಹಾಯ ನೀಡುವ ರಾಷ್ಟ್ರಗಳು ಪ್ರಗತಿ ಸಾಧಿಸುವ ವಿಧಾನಗಳನ್ನು ಹೇಳಿಕೊಡುತ್ತವೆ. ಆದರೆ ದೇಣಿಗೆ ಪಡೆಯುವ ರಾಷ್ಟ್ರಕ್ಕೆ ಪ್ರಗತಿಯ ಬಗ್ಗೆ ತನ್ನದೇ ದೃಷ್ಟಿಕೋನ ಇರಬಹುದು. ಈಗ ಭಾರತವನ್ನೇ ನೋಡಿ. ಇಲ್ಲಿಯ ಸಮಸ್ಯೆ ಎಂಥಾ ಅಗಾಧವಾದದ್ದೆಂದರೆ – ಸಣ್ಣಪುಟ್ಟ ಸುಧಾರಣೆ, ತಿದ್ದುಪಡಿ ಮೂಗಿಗೆ ಜೇನು ತುಪ್ಪ ಸವರುವ ಎಲ್ಲಾ ವಿಧಾನಗಳನ್ನು ಮೀರಿದ ಒಂದು ರಾಜಕೀಯ ಸಿದ್ಧಾಂತವೇ ಇಲ್ಲಿ ರೂಪುಗೊಳ್ಳಬೇಕಾಗಿದೆ.

ಭಾರತದ ಮಟ್ಟಿಗೆ 'ಶಿಕ್ಷಣದ ಗುರಿಯೇನು?' ಎಂಬ ಒಂದೇ ಪ್ರಶ್ನೆ ಭಾರತದ ಸಮಸ್ಯೆಗಳನ್ನು ಹಿಡಿದಿಡುತ್ತದೆ. (ಒಬ್ಬನನ್ನು ಒಂದು ವರ್ಷ ಕಾಲೇಜು ಮಟ್ಟದಲ್ಲಿ ಓದಿಸಲು ಮೂವತ್ತು ರೈತರ ವಾರ್ಷಿಕ ದುಡಿಮೆ ಬೇಕಾಗುತ್ತದೆ ಎಂದು ಮಾವೋನ ಚೈನಾ ಲೆಕ್ಕ ಹಾಕಿತ್ತು.)

ಮಕ್ಕಳಾದರೂ ಓದಿ 'ಕೆಲಸಕ್ಕೆ' ಪ್ರಯತ್ನಿಸಲಿ ಎಂಬ ಆಸೆಯಲ್ಲಿ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿದರೆ ಅವು ಇಂಗ್ಲಿಷ್, ಅಂಬರೀಶ್ ಮಧ್ಯೆ ದಿಕ್ಕೆಟ್ಟು ನಾಶ ವಾಗುತ್ತವೆ.

ಇಷ್ಟಾದರೂ ಮಳೆ, ಗಾಳಿ ಸುಳಿದು, ಇರುವ ಒಂದೋ ಎರಡೋ ಮರಗಳೇ ತಲೆದೂಗಿ, ದೈವಕೃಪೆಯ ಹಾಗೆ ಮಳೆ ಸುರಿದರೆ ಇಷ್ಟು ದಿನ ಕಾಡು ಹರಟೆಯಲ್ಲಿದ್ದವರೆಲ್ಲಾ ಹೊಲದಲ್ಲಿ ಬೆಳಿಗ್ಗೆ ಚುಮುಚುಮು ನಸುಕಿಗೇ ತಯಾರು. ಕಣ್ಣಲ್ಲಿರುವ ಕನಸು, ಕೈಗಳಿಗೆ ಬಲಕೊಟ್ಟು ಉತ್ತು-ಬಿತ್ತಿ ಚಿಗುರೊಡೆದ ಪೈರಿನ ನಳನಳಿಸುವ ಹಸಿರಲ್ಲಿ ತೆನೆ ಒಡೆದಾವೇ ಎಂಬ ಹಂಬಲಿಕೆ.

ಈ ಮಧ್ಯೆ ಆ ಗೊಬ್ಬರ, ಈ ಕ್ರಿಮಿನಾಶಕಗಳ ಥಳುಕಿಗೆ ನಾಲ್ಕು ಕಾಸು ಬಂದೀತೆಂದು ಬಳಸಿ ಕೂರುವುದು. ಬಂದ ಕಾಸಿಗೆ ಮೂರರಷ್ಟು ಖರ್ಚಿನ ದಾರಿ ಬಾಯ್ದೆರೆದು ಕೂತಿರುತ್ತದೆ. ಮೂರು ಕಾಸು ಬೆಳೆಯುವ ಈ ಪ್ರಯತ್ನವೂ ದಕ್ಕಿದರೆ ದಕ್ಕಿತು. ಇಲ್ಲವಾದರೆ ....

ಮತ್ತೆ ಮುಂದಿನ ವರ್ಷ ಅದೇ ಆಕಾಶಕ್ಕೆ ಕಣ್ಣಿಟ್ಟು ಕಾಯುವುದು!

❁ ★ ❁

ಆಗಸ್ಟ್ ಸಂಚಿಕೆ ಚೆನ್ನಾಗಿ ತರಬೇಕೆನ್ನುವ ಆಸೆಯಿದೆ.

ಕುಶಲ ವೃತ್ತಿಯ ಸಮುದಾಯದ ಒಂದು ತಲೆಮಾರು, ಊರು, ಬಗ್ಗೆ ಅಧ್ಯಯನಗಳಿದ್ದರೆ ತಿಳಿಸಿ, ಅಧ್ಯಯನದ ಉದ್ದಿಶ್ಯವಿದ್ದರೂ ತಿಳಿಸಿ.

ಚಂದಾ ಕಳುಹಿಸಿ, ಮಿತ್ರರಿಗೆ ತಿಳಿಸಿ.

(ಸಂಪಾದಕೀಯ ಮಂಡಳಿಯ ಪರವಾಗಿ)

ಕೆ. ಪಿ. ಸುರೇಶ

ಟೀಪೂ - ಒಂದು ಟಿಪ್ಪಣಿ

—ಕೆ. ಆರ್. ಮಲ್ಕಾನಿ

ಟೀಪೂ ಸರಣಿಯ ಬಗ್ಗೆ ಕೇರಳದ ಕೆಲವು ಮಿತ್ರರು ಅಭ್ಯಂತರ ವ್ಯಕ್ತಪಡಿಸಿದ್ದರು. ಅವರ ವಾದ ಏನಪ್ಪಾ ಎಂದರೆ, ಮಲಬಾರ್ ಪ್ರಾಂತದ ಮೇಲೆ ಟೀಪೂ ಧಾಳಿ ನಡೆಸಿದ್ದಾಗ, ಅಲ್ಲಿನ ದೇವಾಲಯಗಳನ್ನು ಕೆಡಿಸಿ, ಹಿಂದೂಗಳನ್ನು ಮತಾಂತರಗೊಳಿಸಿದ್ದ ಎಂದು. ಇದನ್ನು ಸಮರ್ಥಿಸಲು ಟೀಪೂನ ಮಕ್ಕಳ ಪತ್ರಗಳನ್ನು ಉದ್ಧರಿಸಲಾಗಿದೆ.

ಈ ಸಮಸ್ಯೆಯನ್ನು ಕೊಂಚ ವಿಶ್ಲೇಷಿಸೋಣ. ಟೀಪೂ ಮಕ್ಕಳಿಗೆ ಬ್ರಿಟಿಷರು ಭತ್ಯವನ್ನು ಆರುಪಟ್ಟು ಹೆಚ್ಚಿಸಿದ್ದರು. ತಿಂಗಳಿಗೆ ಸಾವಿರ ರೂಪಾಯಿ ಪಡೆಯುತ್ತಿದ್ದ ಉದಯಪುರದ ಮಹಾರಾಣಾ ಬ್ರಿಟಿಷ್ ತೆಕ್ಕೆಗೆ ಬಿದ್ದದ್ದೇ, ದಿನಕ್ಕೆ ಸಾವಿರ ರೂಪಾಯಿಗಳಷ್ಟು ಭತ್ಯೆಯನ್ನು ಬ್ರಿಟಿಷರು ನೀಡಿದರು! ಪ್ರಾಯಶಃ ಟೀಪೂ ಹೀಗೆ ಕೊಳ್ಳಲಾಗಿತ್ತು. ಬ್ರಿಟಿಷರ ಫೋರ್ಜರಿ ಮತ್ತು ಪ್ರಚಾರ ಇತಿಹಾಸವನ್ನು ಮಕ್ಕಳನ್ನು ಇನ್ನಷ್ಟು ಮಸುಕುಗೊಳಿಸಿದೆ. ಮಲಬಾರಿನ ಘಟನೆ ಟೀಪೂನ ಕೈಕೆಳಗಿನ ಅಧಿಕಾರಿಗಳಿಂದ ಆಗಿದ್ದಾದರೂ ಅದು ಟೀಪೂನ ಬಾಳಿನ ಒಂದು ಕಪ್ಪು ಚುಕ್ಕೆ.

ಆದರೆ ನೆನಪಿಡೋಣ. ಚರಿತ್ರೆ ಹೀರೋಗಳ ಕಥೆ. ಹೀರೋಗಳು ಯಾರೂ ಸಂತರಲ್ಲ. ಚಾರಿತ್ರಿಕ ಸಂದರ್ಭವೊಂದರಲ್ಲಿ ನಡೆದ ಘಟನೆಗಳು ನಮ್ಮನ್ನು ವಿಸ್ಮೃತಿಗೊಯ್ಯಬಾರದು. ಅಶೋಕ ಕಳಿಂಗಾದ ಮೇಲೆ ದಂಡೆತ್ತಿ ಹೋಗಿದ್ದರ ಪರಿಣಾಮವಾಗಿ ಒಂದು ಲಕ್ಷ ಜನ ಸತ್ತರು. ಅಶೋಕನ ಮೇಲೆ ಚಿತ್ರಮಾಡಿ ಪ್ರದರ್ಶಿಸಬಾರದೇನು? ಬಂಡಾಬೈರಾಗಿ ಪಂಜಾಬಿನ ಹೀರೋ. ತನ್ನ ಸಿಟ್ಟಿನ ಘಳಿಗೆಯಲ್ಲಿ ಆತ ಮೂವತ್ತು ಸಾವಿರ ಮುಸ್ಲಿಮರನ್ನು ಸಾಯಿಸಿದ. ಇವೆರಡು ಉದಾಹರಣೆಗಳನ್ನು ಯಾಕೆ ಹೇಳಿದೆನೆಂದರೆ ಚರಿತ್ರೆಯ ಕೆಲವು ಘಟನೆಗಳನ್ನು ವರ್ತಮಾನದ ನೆಮ್ಮದಿಗಾಗಿ ಮರೆಯಬೇಕಾಗುತ್ತದೆ.

ಚರಿತ್ರೆಯ ಈ ನಾಯಕರು ಒಂದು ದೇಶದ ಆಸೆ, ಭಯ, ಗುರಿಗಳನು ರೂಪಿಸುತ್ತಾರೆ. ಶಿವಾಜಿ, ರಾಣಾಪ್ರತಾಪ, ಝಾನ್ಸಿರಾಣಿಯಂಥಾ ಹೀರೋ

ಮೋಟಾರು ಕಂಪನಿಗಳು ತಮ್ಮ ಬಿಡಿ ಭಾಗಗಳನ್ನು ಬಡರಾಷ್ಟ್ರಗಳಲ್ಲಿ ತಯಾರು ಮಾಡಿಸಿಕೊಳ್ಳುತ್ತಾರೆ.

ಆಧುನಿಕ ಯಂತ್ರ ನಾಗರಿಕತೆಯ ಇನ್ನೊಂದು ಅಪಾಯವೆಂದರೆ ಯಾವುದೇ ವಸ್ತುವಿನ ಉತ್ಪಾದನೆ ಈಗ ಲಭ್ಯವಿರುವ ಅತ್ಯಾಧುನಿಕ ತಂತ್ರಜ್ಞಾನದಿಂದಷ್ಟೇ ಸಾಧ್ಯ ಎಂಬ ನಂಬಿಕೆ ಕುದುರುತ್ತದೆ. ಈ ವಾದಕ್ಕೆ ಜೋತುಬಿದ್ದ ಮಂದಿ ಶತಮಾನಗಳಿಂದಲೂ ಮಾನವ ತನ್ನ ಜೀವನಾವಶ್ಯಕ ವಸ್ತುಗಳನ್ನು ಸರಳವಾಗಿ ಉತ್ಪಾದಿಸುತ್ತಾ ಬಂದಿದ್ದಾನೆ ಎಂಬುದನ್ನು ಮರೆಯುತ್ತಾರೆ. ಯಾವುದೇ ತಂತ್ರಜ್ಞಾನದ ಬಳಕೆ ಅರ್ಥಪೂರ್ಣವಾಗುವುದು ಯಾವಾಗ ಗೊತ್ತೇ? ಬಂಡವಾಳದ ಮೊತ್ತ ಅಲ್ಲಿನ ಉದ್ಯೋಗಾವಕಾಶದ ಜೊತೆ ತಾದಾತ್ಮ್ಯ ಹೊಂದಿದಾಗ ಮಾತ್ರ.

ಈಗ ಮಾರುಕಟ್ಟೆಯನ್ನು ವಿಶ್ಲೇಷಿಸೋಣ. ನಮ್ಮ ಉತ್ಪನ್ನ–ಮಾರಾಟದ ಆರ್ಥಿಕ ಚಿಂತನೆಗಳು ರಫ್ತು ವ್ಯಾಪಾರದ ಬಗ್ಗೆ ಧ್ಯಾನಿಸಲು ಎರಡು ಕಾರಣಗಳಿವೆ.

ಮೊದಲನೆಯದು ಸಹಜ ಕಾರಣ – ತನ್ನ ಉತ್ಪನ್ನವೊಂದಕ್ಕೆ ವಿದೇಶದಲ್ಲಿ ಬೇಡಿಕೆ ಇದ್ದರೆ ಆಗ ರಫ್ತು ಅರ್ಥಪೂರ್ಣವಾಗುತ್ತದೆ. ಆದರೂ ಇದಕ್ಕೂ ಮಿತಿಯಿದೆ. ಉದ್ಯೋಗಾವಕಾಶ ಸೃಷ್ಟಿಸುವುದರಲ್ಲಾಗಲೀ, ಸ್ಥಳೀಯ ಗ್ರಾಹಕ ಶಕ್ತಿಯನ್ನು ಕುದುರಿಸುವುದರಲ್ಲಾಗಲೀ ಇದು ಯಶಸ್ವಿಯಾದೀತು ಎಂದು ಹೇಳಲು ಸಾಧ್ಯವಿಲ್ಲ.

ಎರಡನೇ ಕಾರಣ ಮುಖ್ಯ – ಇದು ವಸಾಹತುಶಾಹಿ ಆರ್ಥಿಕ ಚಿಂತನೆಯ ಪಳೆಯುಳಿಕೆ. ಪಟ್ಟಣಗಳ ಕೈಗಾರಿಕೋದ್ಯಮಿಗಳು, ಬಂಡವಾಳಶಾಹಿಗಳು ಹಳ್ಳಿಗಳ ಕಡೆ ಹೆಜ್ಜೆ ಹಾಕಿದ್ದು ಗ್ರಾಮೋದ್ಧಾರದ ಪವಿತ್ರ ಉದ್ದೇಶದಿಂದಲ್ಲ; ಬದಲು ಅಲ್ಲಿನ ಸಂಪನ್ಮೂಲಗಳ ಗುತ್ತಿಗೆ ಹಿಡಿದು ತಮ್ಮ ಲಾಭ ಹೆಚ್ಚಿಸಿಕೊಳ್ಳುವುದಕ್ಕಾಗಿ. ವಸಾಹತುಶಾಹಿ ಶಕ್ತಿಗಳು ವ್ಯಾಪಾರದ ಲಾಭದಲ್ಲೇ ಆಸಕ್ತವಾಗಿದ್ದವು: ಮತ್ತು ಎಲ್ಲಾ ವಸಾಹತುಗಳೂ ರಫ್ತಿನ ಕೇಂದ್ರಗಳಾಗಿದ್ದವು. ವಸಾಹತುಶಾಹಿ ರಾಷ್ಟ್ರಗಳು ಕಡಿಮೆ ಬೆಲೆಗೆ ಸಂಪನ್ಮೂಲಗಳನ್ನು ಈ ವಸಾಹತುಗಳಿಂದ ತರಿಸಿಕೊಂಡು ದುಬಾರಿ ಬೆಲೆಗೆ ಅದರ ಉತ್ಪನ್ನಗಳನ್ನು ವಸಾಹತುಗಳಿಗೇ ರಫ್ತು ಮಾಡುತ್ತಿದ್ದವು !!

ಸ್ಥಳೀಯವಾಗಿ ಗ್ರಾಹಕ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಸರ್ಕಾರಗಳು ಲೋಕೋಪಯೋಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತದೆ. ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಇದು ಇತ್ತೀಚೆಗೆ ಮುಖ್ಯವೆನಿಸಿದೆ. ಹೊರಗಿನ ಆರ್ಥಿಕ ಮೂಲದಿಂದ ಹುಟ್ಟುವ ಈ ಗ್ರಾಹಕ ಶಕ್ತಿ ಸಂಪೂರ್ಣ ಅಂತರ್ಗತ ಪರಿಚಲನೆಯೊಂದನ್ನು ಪಡೆಯುವಂತೆ ನೋಡಿಕೊಳ್ಳುವುದು ಮುಖ್ಯ. ಕೂಲಿಕಾರನೊಬ್ಬ ತನ್ನ ಸಂಬಳವನ್ನು ಗ್ರಾಹಕ ವಸ್ತುಗಳ ಮೇಲೆ ವಿನಿಯೋಗಿಸುತ್ತಾನೆ. ಇಂಥಾ ಸಂದರ್ಭ

ದಲ್ಲಿ ಹುಟ್ಟುವ ಅಪಾಯವೆಂದರೆ ಅವನು ಕೊಳ್ಳುವ ವ್ಯಾಪಾರಿ ವಸ್ತುಗಳೆಲ್ಲ ಹೊರಗಿನ ಉತ್ಪನ್ನಗಳೇ ಆಗಿದ್ದರೆ. ದುಡ್ಡು ಮತ್ತೆ ಹೊರಗೆ ಹರಿಯುತ್ತದೆ. ಪಟ್ಟಣದ ಕೈಗಾರಿಕೋದ್ಯಮಿಗೆ ಮರಳುತ್ತದೆ. ಅದರ ಬದಲು ಅವನು ಕೊಳ್ಳುವ ವಸ್ತುಗಳೆಲ್ಲ ಸ್ಥಳೀಯವಾಗೇ ತಯಾರಾಗುವಂಥಾದ್ದಾದರೆ, ಇಡೀ ಆರ್ಥಿಕ ಚಲನೆ ಆ ಪರಿಸರದಲ್ಲೇ ತೊಡಗಿಸಿಕೊಳ್ಳುತ್ತದೆ. ಹೀಗಾದಾಗಷ್ಟೇ, ಸರ್ಕಾರೀ ಕಾರ್ಯಕ್ರಮಗಳು ಅರ್ಥಪೂರ್ಣವಾಗುತ್ತವೆ.

ಈ ದೇಶದಲ್ಲೇ ೧೫ ವರ್ಷಗಳೊಳಗೆ ಎಲ್ಲರಿಗೂ ಉದ್ಯೋಗ ಸೃಷ್ಟಿಸುವುದು ಸಾಧ್ಯವೇ ಇಲ್ಲ ಎಂದು ಭವಿಷ್ಯ ನುಡಿಯುವ ಆಧುನಿಕ ಜೋಯಿಸರನ್ನು ನಾನು ಕಂಡಿದ್ದೇನೆ. ಇದು ಬೌದ್ಧಿಕ ಭ್ರಷ್ಟತೆಯಲ್ಲದೇ ಇನ್ನೇನು ಅಲ್ಲ. ಇವರ ವಾದ ಹೇಗಿರುತ್ತದೆ ಗೊತ್ತೆ? ಒಂದು ಉದ್ಯೋಗ ಸೃಷ್ಟಿಗೆ ಎಷ್ಟು ಸಿಮೆಂಟು, ಎಷ್ಟು ಕರೆಂಟು, ಎಷ್ಟು ಯಂತ್ರೋಪಕರಣ ಬೇಕು ಎಂದು ಇವರು ಲೆಕ್ಕ ಹಾಕುತ್ತಾರೆ ಇನ್ನೊಂದು ವಾದ ಹೀಗಿದೆ. ಯಾವುದೇ ಉತ್ಪಾದನೆಗೆ ಯಂತ್ರಗಳನ್ನು ಉಪಯೋಗಿಸುವುದು ಲಾಭದಾಯಕ. ಮನುಷ್ಯ ದುಡಿಮೆ ಉತ್ಪಾದನಾ ವೆಚ್ಚವನ್ನು ಹೆಚ್ಚಿಸುತ್ತದೆ, ಅಂತ. ಇಡೀ ಜನ ಸಮುದಾಯವೇ ಕೆಲಸವಿಲ್ಲದೇ ನಿರಾಶೆಯಲ್ಲಿ ಕೈಕಟ್ಟಿ ಕೂರುವುದು ಲಾಭದಾಯಕವೇನು? ಅಭಿವೃದ್ಧಿ ಮತ್ತು ಉದ್ಯೋಗಾವಕಾಶ ಪರಸ್ಪರ ವಿರುದ್ಧ ಅಂಶಗಳೆಂದು ಯಾರು ಹೇಳಿದ್ದು? ತನ್ನ ಅನ್ನದ ಹುಟ್ಟುವಳಿಗೂ ಅವಕಾಶಕೊಡದಂತೆ ದುಡಿಮೆಯ ಹಕ್ಕನ್ನು ಕಸಿಯುವ ವ್ಯವಸ್ಥೆ ಕ್ರೂರವಾದದ್ದು; ಭೀಕರವಾದದ್ದು. ತನ್ನ ದೇಶದ ಜನರಿಗೆ ಉದ್ಯೋಗಾವಕಾಶ ಕಲ್ಪಿಸದ ಯಾವ ದೇಶವೂ ಅಭಿವೃದ್ಧಿಯಾಗಿಲ್ಲ ಎಂಬುದು ನೆನಪಿರಲಿ. ಕೋಟ್ಯಾಂತರ ಜನಕ್ಕೆ ಉದ್ಯೋಗ ಕಲ್ಪಿಸುವುದು ಕಷ್ಟಸಾಧ್ಯ ಎಂಬ ಮಾತು ಒಪ್ಪಿಕೊಳ್ಳೋಣ. ಆದರೆ ಸಾಧ್ಯವೇ ,ಇಲ್ಲ ಎಂಬ ಮಾತು ಸೋಗಲಾಡಿತನದ್ದು.

ಮನುಷ್ಯನ ದೈಹಿಕ ಶ್ರಮದ ಬಗ್ಗೆ ವಿಚಿತ್ರವೇನೂ ಇಲ್ಲ. ಮನುಷ್ಯ ಕುಲಕ್ಕೆ ಅತ್ಯಂತ ಸಹಜವಾದ ಕ್ರಿಯೆ ಇದು. ಎಲ್ಲರಿಗೂ ಕೆಲಸ ಒದಗಿಸುವುದು ಸಾಧ್ಯವೇ ಆರ್ಥಿಕವಾಗಿ ಲಾಭದಾಯಕವೇ ಮುಂತಾದ ಕೃತಕ ಸಂಕಷ್ಟಗಳ ಮಾತುಗಳನ್ನು ನಾವು ನಿಲ್ಲಿಸೋಣ. ಎಲ್ಲವನ್ನು ಆರ್ಥಿಕ ಲಾಭದ ಕನ್ನಡಕದ ಮೂಲಕ ನೋಡುವ ಯೋಜನಾ ತಜ್ಞರನ್ನು ನಾವು ಪ್ರಶ್ನಿಸಬೇಕಾಗಿದೆ. ಪ್ರಶ್ನೆ ನಿರುದ್ಯೋಗದ್ದಲ್ಲ. ನಮಗೆ ಈ ಪ್ರಪಂಚದ ಬಡವರ ಬಗ್ಗೆ, ಜನ ಸಾಮಾನ್ಯರ ಬಗ್ಗೆ ಎಷ್ಟು ಅನುಕಂಪ ಇದೆ ಅನ್ನುವುದು.

ಇಂಥಾ ಒಂದು ಸಾಧ್ಯತೆಯ ಉದಾಹರಣೆ ನೀಡಲಿಚ್ಛಿಸುವೆ. ದೇವರು ಈ ದೇಶಕ್ಕೆ ಅಗಾಧವಾದ ವೃಕ್ಷ ಸಂಪತ್ತು ನೀಡಿದ್ದಾನೆ. ಈ ದೇಶದ ಮಹಾನ್ ಚಿಂತಕ ಗೌತಮಬುದ್ಧ ಗಿಡ ನೆಡುವುದು ಪ್ರತಿಯೊಬ್ಬನ ಪವಿತ್ರ ಕರ್ತವ್ಯಗಳಲ್ಲೊಂದು ಎಂದು ಹೇಳಿದ್ದಲ್ಲದೇ ಪ್ರತಿಯೊಬ್ಬನೂ ಕನಿಷ್ಠ ೫ ವರ್ಷಗಳಿಗೊಂದು ಗಿಡ ನೆಟ್ಟು

ಸಾಕಬೇಕೆಂದು ಸಾರಿದ್ದ. ಇದನ್ನು ಪರಿಪಾಲಿಸಿದ್ದರೆ, ಇಂದು ದೇಶವ ತುಂಬಾ ಹಸಿರು ಕಾನನ ತುಂಬಿರುತ್ತಿತ್ತು. ಜುಳು ಜುಳು ನೀರು ಹರಿಯುತ್ತಿತ್ತು. ದೇಶಕ್ಕೆ ಬೇಕಾದಷ್ಟು ಉರುವಲು, ಹಣ್ಣು-ಹಂಪಲು, ಗೊಬ್ಬರ ಸಿಗುತ್ತಿತ್ತು.

ಈಗ ಇದನ್ನು ಕಲ್ಪಿಸಿಕೊಳ್ಳಿ: ಈ ದೇಶದ ಪ್ರತಿಯೊಬ್ಬನೂ – ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ – ವರ್ಷಕ್ಕೊಂದು ಸಸಿ ನೆಟ್ಟು ಬೆಳೆಸುವುದು ಕಡ್ಡಾಯಗೊಳಿಸಿದರೆ ಹೇಗಿರುತ್ತದೆ? ಸತತ ಐದು ವರ್ಷಕಾಲ ಈ ನೀತಿ ಜಾರಿಯಲ್ಲಿದ್ದರೆ ಈ ದೇಶದಲ್ಲಿ ೪೦೦ ಕೋಟಿ ಮರಗಳಿರುತ್ತವೆ. ಇದರ ಆರ್ಥಿಕ ಲಾಭವನ್ನು ಯಾರು ಬೇಕಿದ್ದರೂ ಪೆನ್ನು, ಕಾಗದ ಕೈಕೊಂಡು ಲೆಕ್ಕಹಾಕಬಹುದು. ಈ ದೇಶದ ಯಾವುದೇ ಪಂಚವಾರ್ಷಿಕ ಯೋಜನೆಯ ಹುಟ್ಟುವಳಿಗಿಂತ ಈ ಆದಾಯ ಹೆಚ್ಚಿರುತ್ತದೆ. ಇದಕ್ಕೆ ಒಂದು ಪೈಸೆಯಷ್ಟು ವಿದೇಶೀ ಬಂಡವಾಳ, ಸಹಕಾರ ಬೇಕಾಗಿಲ್ಲ ಅಲ್ಲವೇ? ನಮ್ಮ ಸರಳ ಬದುಕಿಗೆ ಬೇಕಾದ ಅನ್ನ, ನೀರು, ನೆರಳು ಎಲ್ಲವನ್ನೂ ಇವು ಒದಗಿಸಿಯಾವು.

ಇದೇನು ಭಾರತದ ಕಗ್ಗಂಟಿಗೆ ಅಂತಿಮ ಪರಿಹಾರವೆಂದೇನೂ ನಾನು ಹೇಳುತ್ತಿಲ್ಲ, ಆದರೆ ಯಾವುದೇ ಕ್ರಿಯೆಗಳಿಯಲೂ ಕರೆಂಟು, ಸಿಮೆಂಟು ಬೇಕೆಂದು ನಮಗೆ ಯಾರು ಹೇಳಿದ್ದು? ಈ ದೇಶದ ಮೂಲಭೂತ ಸಮಸ್ಯೆಗಳ ನಿವಾರಣೆಯ ಬಗ್ಗೆ ಚಿಂತಿಸಲಾರದ ವಿದ್ಯಾಭ್ಯಾಸ ಯಾವ ಸುಡುಗಾಡಿಗೆ?

ಈ ಭೂಮಿಯಲ್ಲಿ ಹುಟ್ಟಿದ ಪ್ರತಿಯೊಬ್ಬನೂ ನೆನಪಿಟ್ಟುಕೊಳ್ಳಬೇಕಾದ್ದು ಏನೆಂದರೆ – ಕೈಗಳ ಮೂಲಕ ಮತ್ತೆ ಉಪಯುಕ್ತ ದುಡಿಮೆಗಿಳಿಯುವುದು ಅತ್ಯಂತ ಸಹಜವಾದದ್ದು ಮತ್ತು ಅನಿವಾರ್ಯವಾದದ್ದು ಕೂಡಾ. ಹೀಗೆ ಕಾರ್ಯಶೀಲವಾದಾಗ ನಿರುದ್ಯೋಗವಷ್ಟೇ ಅಲ್ಲ ನಮ್ಮ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ. ★

ಕನ್ನಡಕ್ಕೆ- **ಕೆ.ಪಿ.ಎಸ್.**

---

೪ ನೇ ಪುಟದಿಂದ ......ಟೀಪೂ-ಒಂದು ಟಿಪ್ಪಣಿ

ಅಮೆರಿಕಾದ ಸ್ವಾತಂತ್ರ್ಯ ಘೋಷಣೆಯನ್ನು ೧೦೮ ಫಿರಂಗಿಗಳ ಗೌರವದೊಡನೆ ಟೀಪೂ ಸ್ವಾಗತಿಸಿದ್ದ. ಅಮೆರಿಕಾದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬೆಂಜಮಿನ್ ಫ್ರಾಂಕ್ಲಿನ್‌ಗೆ ಧನ ಸಹಾಯ ಕಳುಹಿಸಿ ಸ್ವಾತಂತ್ರ್ಯ ಹೋರಾಟಕ್ಕೆ ತನ್ನ ಕಾಣಿಕೆ ಎಂದು ತಿಳಿಸಿದ್ದ.

ಬಯಸಿದ್ದರೆ ಟೀಪೂ ಬ್ರಿಟಿಷರಿಗೆ ನಡು ಬಗ್ಗಿಸಿ ಸುಖವಾಗಿರಬಹುದಾಗಿತ್ತು. ಹಾಗೇನಾದರೂ ಮಾಡಿದ್ದರೆ, ಇಂದು ಆತನ ಮೊಮ್ಮಕ್ಕಳು ಕಲ್ಕತ್ತಾದ ಬೀದಿಗಳಲ್ಲಿ ಸೈಕಲ್ ರಿಕ್ಷಾ ತುಳಿಯಬೇಕಾಗಿ ಬರುತ್ತಿರಲಿಲ್ಲ. ಭಾರತದ ನೂರಾರು ಮಹಾರಾಜರ ಸಂತತಿಯಂತೆ ಸುಖವಾಗಿರುತ್ತಿದ್ದರೋ ಏನೋ. ಆದರೆ ಟೀಪೂ ತನ್ನ ಸ್ವಾತಂತ್ರ್ಯ, ಗೌರವಗಳಿಗಾಗಿ ಪ್ರಾಣ ತೆತ್ತ. ★

ಭಾರತದಲ್ಲಿ ಕೋಮುವಾದ : ಒಂದು ಟಿಪ್ಪಣಿ

ಪ್ರತೀ ರಾಜಕೀಯ ವ್ಯವಸ್ಥೆಗೂ ಒಂದು ಮೌಲ್ಯದ ಸಾಂಸ್ಥಿಕ ಲಂಗರು ಬೇಕಾಗುತ್ತದೆ. ವಿದೇಶೀ ದಬ್ಬಾಳಿಕೆಯಿಂದ ಮುಕ್ತಿ ಪಡೆದ ಎಲ್ಲಾ ರಾಷ್ಟ್ರಗಳೂ ಒಂದಲ್ಲೊಂದು ರೀತಿಯಲ್ಲಿ ನೆಲೆತಪ್ಪಿ ದುರಂತಕ್ಕೊಳಗಾಗಿವೆ. ಇವೆಲ್ಲ ತಮ್ಮ ಉಳಿವಿಗಾಗಿ ಭಾಷೆ, ಪ್ರಾಂತ್ಯ ಮತ್ತು ಧಾರ್ಮಿಕ ಗುಂಪುಗಾರಿಕೆಯನ್ನೇ ನೆಚ್ಚಿಕೊಳ್ಳ ಬೇಕಾಗುತ್ತದೆ.

ಭಾರತದ ಮಟ್ಟಿಗೆ ಕೋಮುವಾದ ತನ್ನ ಕರಾಳ ನೆರಳನ್ನು ಚಾಚುತ್ತಿದೆ. ಈ ದೇಶದ ಎಲ್ಲಾ ಪ್ರಜಾಸತ್ತಾತ್ಮಕ ಸಂಸ್ಥೆಗಳೂ ಅರ್ಥಹೀನವೆನ್ನಿಸಿರುವ ಈ ದಿನ ಗಳಲ್ಲಿ ಕೋಮುವಾರು, ಭಾಷಾ ಶಕ್ತಿಗಳು ಪ್ರಬಲವಾಗುತ್ತಿರುವುದು ಅಸಹಜವಲ್ಲ. ಸ್ವಾತಂತ್ರ್ಯ ನಂತರದ ಗಡಿ ಘರ್ಷಣೆ, ಯುದ್ಧಗಳೂ ಈ ಕೋಮು ಕುರುಡುತನಕ್ಕೆ ಕಾಣಿಕೆ ಸಲ್ಲಿಸಿದೆ. ಇಂದು ರಾಮಜನ್ಮ ಭೂಮಿಯೂ ಭಾವೋನ್ಮಾದದ ರಾಗ ವಿಕೋಪಕ್ಕೆ ಕಾರಣವಾಗಿರುವುದರ ಹಿಂದೆ ಈ ದೇಶದ ನೈತಿಕ ಮೌಲ್ಯಗಳನ್ನಾಧರಿ ಸಿದ ಸಂಸ್ಥೆಗಳು ಶಕ್ತಿ ಕಳಕೊಂಡಿರುವುದೇ ಕಾರಣ.

ಬ್ರಿಟಿಷರು ತೊಲಗಿದ ಮೇಲೆ ಭಾರತದ ಭವಿಷ್ಯವನ್ನು ರೂಪಿಸುವ ಹೊಣೆ ಕಾಂಗ್ರೆಸ್ ಮೇಲೆ ಬಿತ್ತು. ಚಾರಿತ್ರಿಕವಾಗಿ ಇದು ಅನಿವಾರ್ಯವೂ ಆಗಿತ್ತು. ೪೭ ರ ಹಿಂದೆ ಮುಂದೆ ನಡೆದ ಕೋಮು ದಳ್ಳುರಿಯ ನೋವನ್ನು ಮಾಗಿಸುವಲ್ಲಿ ಆಗಿನ ನಾಯಕತ್ವ ಯಶಸ್ವಿಯೂ ಆಗಿತ್ತು. ಆದರೆ ನಿಧಾನವಾಗಿ ಶಕ್ತಿಕೇಂದ್ರವು ಜನಾಧಾ ರಿತ ಪಾಕ್ಷಿಕ ಸಂಘಟನೆಯಿಂದ ಸರ್ಕಾರಕ್ಕೆ ವರ್ಗಾವಣೆಯಾಯಿತು. ಆಡಳಿತ ಅಧಿ ಕಾರವೇ ಶಕ್ತಿಯ ಉಗಮಸ್ಥಾನವಾಯಿತು. ಈ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ಸಿನ ಸಾಂಸ್ಥಿಕ, ಸಂಘಟನಾತ್ಮಕ ಬೇರುಗಳು ಸಡಿಲವಾಗತೊಡಗಿದವು. ಆಗಲೇ ಗ್ರಾಮಾಂತರ ಪ್ರದೇಶದಲ್ಲಿ ಶ್ರೀಮಂತ ಭೂಮಾಲೀಕರು, ಪಟ್ಟಣದಲ್ಲಿ ಕೈಗಾರಿಕೋ ದ್ಯಮಿಗಳು ರಾಜಕೀಯ ಶಕ್ತಿಯ ಮೂಲ ಸೆಲೆಯಾಗಿ ಒದಗಿ ಬಂದದ್ದು.

೬೦ ರ ದಶಕದವರೆಗೂ ಈ ಬದಲಾವಣೆ ವಿಶೇಷವಾಗಿ ಗಮನಕ್ಕೆ ಬರಲಿಲ್ಲ. ಯಾಕೆಂದರೆ ಸ್ವಾತಂತ್ರ್ಯ ಹೋರಾಟದ ದಿಗ್ಗಜಗಳು ಇನ್ನೂ ಶಕ್ತಿ ಪ್ರಭಾವಳಿ ಹೊಂದಿದ್ದರು. ೬೦ ರ ದಶಕದ ಅಂತ್ಯಕ್ಕೆ ಪಕ್ಷ ಮತ್ತು ಸರ್ಕಾರಗಳೆರಡೂ ದ್ವಂದ್ವ ವ್ಯಕ್ತಿತ್ವದ ನಾಯಕತ್ವದ ಕೈಗೆ ಬಂದಿದ್ದವು. ಭೂಮಾಲೀಕರು ಮತ್ತು ಕೈಗಾರಿಕಾ ಶ್ರೀಮಂತರ ಹಿತಾಸಕ್ತಿಗಳನ್ನು ಪ್ರತಿನಿಧಿಸಿದ ಈ ನಾಯಕತ್ವ ಸಾಮಾನ್ಯ ಜನತೆಗೆ ಒತ್ತು ಕೊಟ್ಟಿತು.

ರಾಜಕೀಯ ನಿರ್ಧಾರಗಳು, ಧೋರಣೆಗಳು ಬುಡಮಟ್ಟದ ಪಾಕ್ಷಿಕ ಚರ್ಚೆಗೆ ಒಳಗಾಗಲೇ ಇಲ್ಲ. ಅಷ್ಟೇ ಏಕೆ, ಇವೆಲ್ಲ ಪ್ರಜಾಸತ್ತಾತ್ಮಕ ವಿಧಿ, ವಿಧಾನಗಳ ಬಗ್ಗೆ ತಿರಸ್ಕಾರ ಹೊಂದಿದ್ದ ಪುಟ್ಟ ಗುಂಪಿನ ಸ್ವೇಚ್ಛೆಯ ಚಟುವಟಿಕೆಗಳಾದವು. ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ, ಪತ್ರಿಕೆಗಳು – ಹೀಗೆ ಪ್ರಜಾಸತ್ತೆಯ ಮುಖ್ಯ ಸಾಂಸ್ಥಿಕ ರೂಪಗಳನ್ನೆಲ್ಲಾ ವ್ಯವಸ್ಥಿತವಾಗಿ ವಿರೂಪಗೊಳಿಸುವ ಚಟುವಟಿಕೆಗಳು ಶುರುವಾದವು.

ಜನ ಸಮುದಾಯಕ್ಕೆ ಏನೊಂದೂ ಒಳಿತು ಮಾಡದೆ ಅವರ ಕಷ್ಟ ಕಾರ್ಪಣ್ಯ ಗಳಿಗೆ ಕಿವುಡಾದ ರಾಜಕೀಯ ದಳ್ಳಾಳಿಗಳಿಗೆ ಚುನಾವಣೆಯ ಕಾಲಕ್ಕೆ ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗುವ ಧೈರ್ಯವೂ ಇರಲಿಲ್ಲ. ಚುನಾವಣೆಯನ್ನು ಗೆಲ್ಲುವುದೇ ಗುರಿ ಮಾಡಿಟ್ಟುಕೊಂಡ ಈ ವರ್ಗ ನಮ್ಮ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಇನ್ನು ಜೀವ ಉಳಿಸಿಕೊಂಡಿದ್ದ ಕೋಮು ಭಾವನೆಗಳನ್ನು ಬಡಿದೆಬ್ಬಿಸಿ, ಬೆಳೆಸಿ, ಬಳಸಿ ಕೊಂಡರು. ಇನ್ನು ಜಾತಿಗುಂಪುಗಳಾಗೇ ಉಳಿದಿದ್ದ ಜನ ಸಮುದಾಯವನ್ನು ಏಕಾಏಕಿ ರಾಜಕೀಯ ಸ್ವಾರ್ಥಕ್ಕೆ ಬಳಸಿಕೊಳ್ಳುವುದರ ಮೂಲಕ ಜಾತಿ ರಾಜ ಕಾರಣಕ್ಕೆ ಹೊಸ ಶಕ್ತಿ ಬಂದಿತು. ಹೊಸ ರಾಜಕೀಯ ವ್ಯವಸ್ಥೆಯಲ್ಲಿ ತನ್ನ ಬಲ ಮತ್ತು ಸ್ಥಾನವನ್ನು ಕಂಡುಕೊಂಡ ಜಾತಿ ಕೋಮು/ಪ್ರಜ್ಞೆ ರಾಕ್ಷಸಾಕಾರ ಪಡೆದು ಕೊಂಡಿತು.

ಆರ್ಥಿಕ ಅಸಮಾನತೆಯೂ ಇದಕ್ಕೆ ಸಹಾಯ ಮಾಡಿತು. ಚಾರಿತ್ರಿಕವಾಗಿ ಹಿಂದುಳಿದಿದ್ದ ಒಂದು ಕೋಮು ತನ್ನ ಹಿಂದುಳಿದಿರುವಿಕೆಗೆ ಸ್ಪಷ್ಟ ಕಾರಣ, ಪರಿಹಾರ ದೊರಕದೇ ಒದ್ದಾಡುತ್ತಿದ್ದಾಗ, ರಾಜಕೀಯ ದಳ್ಳಾಳಿ ವರ್ಗ ಇನ್ನೊಂದು ಕೋಮು ಜಾತಿಯನ್ನು ಬೆಟ್ಟು ಮಾಡಿ ತೋರಿಸುವುದರ ಮೂಲಕ ತನ್ನ ಜವಾಬ್ದಾರಿಯನ್ನು ಕಳಚಿಕೊಂಡದ್ದಷ್ಟೇ ಅಲ್ಲ, ಕೋಮು ವಿದ್ವೇಷಕ್ಕೆ ನಾಂದಿ ಹಾಕಿಕೊಟ್ಟಿತು.

ಆರಂಭಕ್ಕೇನೋ ರಾಜಕೀಯ ಪಕ್ಷಗಳು ಜಾತಿ/ಕೋಮು ಪ್ರಜ್ಞೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡವು. ಇಂದು ಅವೇ ಜಾತಿ/ಕೋಮು ಶಕ್ತಿಗಳು ರಾಜಕೀಯ ಪಕ್ಷಗಳನ್ನು ನಿಯಂತ್ರಿಸತೊಡಗಿವೆ.

೧೫ ನೇ ಪುಟ ನೋಡಿ

ಸುವರ್ಣ ಪುತ್ಥಳಿ

—ಎಂ. ಗೋಪಾಲಕೃಷ್ಣ ಅಡಿಗ

(ಪುಸ್ತಕಗಳ ಪರಿಚಯವನ್ನು ಎರಡು ವಿಧವಾಗಿ ಮಾಡಬಹುದೆಂದು ತೋರುತ್ತದೆ. ಒಂದು, ಆ ಪುಸ್ತಕದ ವಿಮರ್ಶೆಯ ಮೂಲಕ; ಇನ್ನೊಂದು, ಪುಸ್ತಕದ ಗುಣಾಂಶವನ್ನು ಪ್ರತಿನಿಧಿಸಬಹುದಾದ ಪಠ್ಯಭಾಗವನ್ನು ಆ ಪುಸ್ತಕದಿಂದ ಆಯ್ದು ಮಂಡಿಸುವುದರ ಮೂಲಕ. ಇದರಿಂದ ಲೇಖಕ ಮತ್ತು ಓದುಗರ ಮಧ್ಯೆ ನೇರ ಸಂಪರ್ಕ ಉಂಟಾಗಿ ಆ ಪುಸ್ತಕದ ಬಗ್ಗೆ ಆಸಕ್ತಿ ಹುಟ್ಟಿ, ಓದುಗ ಆ ಪುಸ್ತಕವನ್ನು ಖರೀದಿಸಿ ತನ್ನ ಸ್ವಂತ ಪುಸ್ತಕ ಭಂಡಾರದ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಬಹುದು.–ಸಂ)

ಪುಸ್ತಕದ ಹೆಸರು	:	ಸುವರ್ಣ ಪುತ್ಥಳಿ
ಲೇಖಕರು	:	ಎಂ. ಗೋಪಾಲಕೃಷ್ಣ ಅಡಿಗ
ಪ್ರಕಾಶಕರು	:	ಅಪರ್ಣಾ ಪ್ರಕಾಶನ, ೪೩/೪೮, ೭ ನೇ ಕ್ರಾಸ್ ವಸಂತನಗರ, ಬೆಂಗಳೂರು ೫೨
ಪುಟಗಳು	:	೧೮+೫೨
ಬೆಲೆ	:	೧೫ ರೂ. ಗಳು

”……..ಅದರ ಉತ್ತಮ ಕವಿತೆಗಳು ಏಕಾಂತದ ಆಪ್ತ ವಾಕ್ಯದಂತಿದ್ದರೆ ಈ ಹೊಸಕವಿತೆಗಳು ಭಾಷಣದಂತೇಯೋ ಗೊಣಗಾಟದಂತೆಯೋ ಕೇಳಿಸುತ್ತದೆ.. ….. ಈ ಸಂಕಲನದ ಪದ್ಯಗಳಲ್ಲೂ ಅವರು ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ಬರೆದ ಪದ್ಯಗಳ ನುಡಿಗಟ್ಟುಗಳು ಮತ್ತು ಪ್ರತಿಮೆಗಳು ಕಾಣಿಸಿಕೊಳ್ಳುತ್ತವೆ.

ಚರಿತ್ರೆಯಲ್ಲಿ, 'ಕಳೆದದ್ದನ್ನು ಪಡೆವಬಗೆ ಹೇಗೆ' ಎಂಬುದನ್ನು ಅಡಿಗರ ಅನೇಕ ಕವಿತೆಗಳು ಚಿಂತಿಸಿವೆ. ಆದರೆ ಅವರ ಕಾವ್ಯದಲ್ಲಿ ಎಲ್ಲಿಯೂ ಕಳೆದದ್ದನ್ನು ಪಡೆಯುವುದು, ಅಂದರೆ ಚರಿತ್ರೆಗೆ ವಾರಸುದಾರರಾಗುವುದು ಸುಲಭಸಾಧ್ಯ ಎಂಬ ಭ್ರಮೆ ಇಲ್ಲ.

.... ಅಡಿಗರು ಇವತ್ತಿನ ರಾಜಕೀಯದ ಮಟ್ಟಿಗೆ ವ್ಯಕ್ತಿವಾದಿಯಲ್ಲ: ಮತಧರ್ಮ ಮತ್ತು ಚರಿತ್ರೆಗಳಿಂದ ನಾವು ಪಡೆದ ಆದರ್ಶಗಳ ಮಟ್ಟಿಗೂ ವ್ಯಕ್ತಿವಾದಿಯೇ. ………ಸುಳ್ಳು, ಆತ್ಮವಂಚನೆ, ತಟವಟ, ಹಾಗೂ ವಾಗ್ರೂಪದ ಅಮಲು, ನಿರಾಂತಕ ಮಾತಿನ ಬೊಜ್ಜುಗಳನ್ನು ಅವರು ಖಂಡಿಸಿದ್ದು ಮಾತ್ರವಲ್ಲ. ಸಂಸ್ಥೆಯ

ಸ್ವರೂಪ ಪಡೆದ ಧರ್ಮದಲ್ಲಿ ಮತ್ತು ಚರಿತ್ರೆಯ ವಾರಸುದಾರಿಕೆಗಳಲ್ಲಿ ಕೂಡ ಅವರು ವಿಶ್ವಾಸ ಇಟ್ಟವರಲ್ಲ.

–ಜಿ. ರಾಜಶೇಖರ (ಮುನ್ನುಡಿಯಿಂದ)

೧

ಮೌನದ ಸುವರ್ಣ ಪುತ್ಥಳಿ ನೀನು ನಿನ್ನ ಹೊರ ರೂಪಕ್ಕೆ
ಮರುಳಾಗಿದ್ದೇನೆಂದು ನಾನು
ಈಗಲೂ ಕೂಡ ಆ ಮರುಳು ಮೈ ಬಿಟ್ಟಿಲ್ಲ
ನಿನ್ನಂತರಂಗದ ವ್ಯಕ್ತ ಕಂಪು ಸೊಂಪು ಆಗಾಗ ಒಂದಿಷ್ಟು
ಹೊರಪಟ್ಟರದೆ ಒಂದು ಭಾರೀ ಪವಾಡ.
ಇಷ್ಟುದಿನ ನೀನೆಂತು ಅರ್ಧಾಂಗಿಯಾಗಿಯೂ
ಬಾಯಿರದ ಈ ಬಾಳ ಶಾಳಿ ಬಂದೆ ?
ಮೂವತ್ತ ಮೂರನೆಯ ಸಾಲಭಂಜಿಕೆ ನೀನು ನಿನ್ನೆದೆಯ
ಕಥೆಯನೇತಕ್ಕಿಂತು ತಡೆದುಕೊಂಡೆ ?
ತಾಳಿಭಾಗ್ಯಕ್ಕಿಷ್ಟು ಬೆಲೆಯೆ ಏತಕ್ಕಾಗಿ ಇಷ್ಟು ತೆತ್ತೆ ?
ಮೌನದಂಚಿಗೆ ಬಂದುನಿಂತ ಮಿಡುಕಾಟವೆ ಏ ಚೆನ್ನೆ
ಮನೆಯ ನಂದನ ಮಾಡಿ ಮರೆನಿಂತ ಸುರಸುರಭಿಯೇ
ನಿನ್ನೀ ನಿರಂತರ ಶ್ರಮಕ್ಕೇನು ಸಂಭಾವನೆ ?
ಸೊಲ್ಲಿರದೆ ಸಲ್ಲಿಸಿದ ಈ ಕಠೋರ ವ್ರತಕ್ಕೆಂದು
ಉದ್ಯಾಪನೆ ?

೨

ನಿನ್ನಂತರಂಗದೊಳಚೆಲುವನ್ನು ಕಂಡದ್ದು ಅಷ್ಟಿಷ್ಟು;
ಈಗಲೂ ಆ ಕಾಣ್ಕೆ ಯಾವಾಗಲೋ ಅಪ್ಪಿತಪ್ಪಿ;
ಮುಖದಲ್ಲಿ ಮೂಡಿ ಮಸುಳುವ ಭಾವ ಭಾವಾಂತರದ
ನೂರಾರು ಮುದ್ರೆಗಳ ನಿನ್ನ ಭಾಷೆ
ಕಲಿತು ಅರ್ಥೈಸುತ್ತ ಬದುಕಿ ಬಂದೆ
ಅದೆ ಅದೇ ತಾಯೊಲವು ನಿಷ್ಠೆ ಮುಗಿಯದ ದುಡಿಮೆ.
ಈ ಇಂಥ ಕರ್ಮಯೋಗವನೆಂತು ಎಲ್ಲಿಂದ
ಕಲಿತುಕೊಂಡೆ ?
ನಲ್ಲೆಯಾಗುದ್ದಕ್ಕು ನಲವ ಬಿತ್ತಿದ ರನ್ನೆ
ನೀನೀಗ ವಾತ್ಸಲ್ಯಮಯಿ ತಾಯಿ
ಮೈ ತೊಳಿಸಿ ಉಣ ಬಡಿಸಿ ಎಲ್ಲವನ್ನಣಿಗೊಳಿಸಿ
ಕೈ ಹಿಡಿದು ನಡೆಸುತ್ತಿರುವ ಊರೆಗೋಲೇ

ನಿನ್ನಂತರಂಗದ ಮೃದುತ್ವ ಕಾರುಣ್ಯ ಅನುಕಂಪ
ಎಲ್ಲವೂ ಪ್ರತ್ಯಕ್ಷ ಕೃತಿರೂಪದಲ್ಲಿ.
ವಾಚ್ಯ ಅವಾಚ್ಯ ಪದದಾಚೆ ಸಂಕೀರ್ಣ
ಸಂಕೇತಗಳ ಸೂಚ್ಯತೆಗೆ ಬದ್ಧ ಮುಗ್ಧೆ :
ಕೃತಿಯ ಕೃತಕೃತ್ಯತೆಯ ಬಿಟ್ಟು ಆದರ್ಶ ಹೊಸರುವ ಭಾರಿ
ಭಾಷಣದಸುಲಭೋಪಾಯ ನಿನ್ನದಲ್ಲ.

ಎರಡು ಮಾತುಗಳಲ್ಲಿ ನೂರೊಂದು ಧ್ವನಿ ಮೊಳಗಿಸುವ
ಪ್ರೌಢಕಾವ್ಯದ ರೀತಿ ನಿನ್ನ ನೀತಿ.

(೧೦-೭-೧೯೮೮)

೧೨ ನೇ ಪುಟದಿಂದ......ಭಾರತದಲ್ಲಿ ಕೋಮುವಾದ

ಒಂದು ಪ್ರಜಾಸತ್ತೆಗೆ ಇದರಿಂದ ದೊಡ್ಡ ಅಪಾಯ ಬೇರೆ ಇರದು. 'ಮೌಲ್ಯ ಪ್ರತಿಪಾದಿತ ಸಾಂಸ್ಥಿಕ ರಚನೆಯಲ್ಲದ ಸರ್ಕಾರ ಅಶಕ್ತ ಸರ್ಕಾರವಷ್ಟೇ ಅಲ್ಲ, ಕೆಟ್ಟ ಸರ್ಕಾರ ಕೂಡಾ' ಎಂದು ರಾಜಕೀಯ ವಿಜ್ಞಾನಿ ಹಂಟಿಂಗ್ಟನ್ ಒಂದೆಡೆ ಹೇಳಿದ್ದಾರೆ.

ಸಮಾನ ಹಂಚಿಕೆಯ ಹೊಸ ಆರ್ಥಿಕ ಕಾರ್ಯಕ್ರಮಗಳು ಮತ್ತು ಉದ್ವೇಗ ರಹಿತ, ನಿಷ್ಪಕ್ಷಪಾತೀ, ದಕ್ಷ ಸಾಂಸ್ಥಿಕ ರಚನೆಗಳಷ್ಟೇ ಇಂಥಾ ಅಪಾಯವನ್ನು ತಡೆ ಗಟ್ಟಿಯಾವು. ಪ್ರಜಾಸತ್ತೆಯ ಬೆಳವಣಿಗೆ ಮತ್ತು ಕಾರ್ಯಕ್ರಮಗಳೇ ಮುಖ್ಯ ಎಂದು ಮತದಾರರನ್ನು ಪ್ರೇರೇಪಿಸಬಲ್ಲ ಜಾತ್ಯತೀತ, ಪ್ರಾಮಾಣಿಕ ರಾಜಕೀಯ ಪಕ್ಷಗಳಷ್ಟೇ ಈ ದುರಂತಕಾರೀ ಸ್ಥಿತಿಯಿಂದ ತಮ್ಮನ್ನೂ, ಜನರನ್ನೂ, ದೇಶವನ್ನೂ ಉಳಿಸಿಯಾವಷ್ಟೇ.★

(ಆಧಾರ)

★

ಈ ಘಳಿಗೆಯಲ್ಲಿ ಅವಶ್ಯಕವಾಗಿರುವುದು ಏಕ ಧರ್ಮವಲ್ಲ, ವಿವಿಧ ಧರ್ಮಗಳ ಭಕ್ತರಲ್ಲಿ ಪರಸ್ಪರ ಗೌರವ ಮತ್ತು ಸಹನೆ. ನಾವು ಸೇರಬೇಕಾಗಿರುವುದು ಒಂದೇ ಶವಸಹಜ ಘಟ್ಟವನ್ನಲ್ಲ. ಅನೇಕತ್ವದಲ್ಲಿ ಏಕತ್ವವನ್ನ. ಪರಂಪರಾನುಗತವಾದ ಆನುವಂಶಿಕ ಪ್ರಭಾವ, ಹವಾಮಾನ, ಇತರ ಸನ್ನಿವೇಶಗಳು ಮುಂತಾದುವನ್ನು ಬೇರು ಸಹಿತ ಕೀಳಲೆತ್ನಿಸುವುದು ಖಂಡಿತಾ ವಿಫಲವಾಗುವುದಲ್ಲದೆ ಧರ್ಮ ದ್ರೋಹವೂ ಆದೀತು.

–ಮಹಾತ್ಮಾ ಗಾಂಧಿ

(ಯಂಗ್ ಇಂಡಿಯಾ ೨೫.೯.೨೫)

ಶಾಶ್ವತ ಅರ್ಥಶಾಸ್ತ್ರ-೧೩ ಶ್ರಮ ವಿಭಾಗ

—ಜೆ. ಸಿ. ಕುಮಾರಪ್ಪ

(ಜೆ.ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವರ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪ ಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಿಸಲಾಗುತ್ತಿದೆ. ಅನುವಾದ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮಾ—ಸಂ.)

ಯೋಜನೆಯ ಅಗತ್ಯ – ರೂಪು

ಯೋಜನೆ ಮಾಡಲೇಕೆ? ರಾಷ್ಟ್ರೀಯ ಯೋಜನೆ ಎಂದರೆ ಏನೋ ಕಗ್ಗಂಟು, ಕೇವಲ ತಜ್ಞರಿಗೆ, ಪಂಡಿತರಿಗೆ ಮಾತ್ರವೇ ಅದು ಅರ್ಥವಾಗುತ್ತದೆ ಎಂದು ಅನೇಕರು ತಿಳಿದಿದ್ದಾರೆ. ಬೀದಿಯಲ್ಲಿ ಓಡಾಡುವ ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ನಾವು ಏಕೆ ಯೋಜನೆ ಮಾಡುತ್ತಿದ್ದೇವೋ ತಿಳಿಯದಿದ್ದರೆ ಆ ಯೋಜನೆ ನಿರ್ಜೀವವಾಗುತ್ತದೆ. ನಮ್ಮ ರೈತರಿಗೆ ಯೋಜನೆ ಅರ್ಥವಾಗದಿದ್ದರೆ, ಅದನ್ನು ನೆರವೇರಿಸಲು ಅವರು ಮನಸಾರೆ ನೆರವಾಗದಿದ್ದರೆ, ಅಂಥ ಯೋಜನೆ ರಾಷ್ಟ್ರೀಯ ಯೋಜನೆಯಲ್ಲ. ಜನರ ಬುದ್ಧಿಗೆ ಎಟುಕದಿದ್ದರೆ ಅಂಥ ಯೋಜನೆಯನ್ನು ನಿರ್ವಹಿಸುವುದು ಅಸಾಧ್ಯ. ರಷ್ಯಾದಲ್ಲಿ ಮಾಡಿದಂತೆ ಅಪಾರ ಹಿಂಸೆ-ಬಲಾತ್ಕಾರಗಳಿಂದ ಅದನ್ನು ಸಾಧಿಸಬೇಕಾದೀತು. ನಮಗೆ ಯೋಜನೆಯನ್ನು ಸಾಧಿಸಲು ರಕ್ತಪಾತ ಬೇಕಾಗಿಲ್ಲ. ಜನಕ್ಕೆ ಯೋಜನೆಯಲ್ಲಿ ತಮ್ಮ ಹಿತವಿದೆಯೋ ಇಲ್ಲವೋ ತಿಳಿಯಬೇಕು. ಅವರಿಗೆ ಅದು ಒಪ್ಪಿಗೆಯಾದರೆ ಅವರ ಮನಃಪೂರ್ಣ ಸಹಕಾರ ಸಿಗುತ್ತದೆ.

ತಮ್ಮ ಹಳ್ಳಿಗಳು ಸಮೃದ್ಧವಾಗಬೇಕು, ಸುಖಮಯವಾಗಿ ಪೂರ್ಣ ಜೀವನವನ್ನು ಅನುಭವಿಸಬೇಕು; ಪ್ರತಿಯೊಬ್ಬ ಗ್ರಾಮಸ್ಥನಿಗೂ ವೈಯಕ್ತಿಕವಾಗಿಯೂ ಸುಸಂಘಟಿತ ಸಮಾಜದ ಒಬ್ಬ ಸದಸ್ಯನಾಗಿಯೂ ವಿಕಾಸಗೊಳ್ಳಲು ಪೂರ್ಣಾವಕಾಶವಿರಬೇಕು. ಹಳ್ಳಿಗಳನ್ನು ಹೀಗೆ ರೂಪಿಸಬೇಕು—ಇದು ನಮ್ಮ

ಉದ್ದೇಶ. ಇದನ್ನು ಸಾಧಿಸಲು ಆಯಾ ಹಳ್ಳಿಯ ಶಕ್ತಿ ಸಾಮರ್ಥ್ಯಗಳನ್ನು ಅನುಕೂಲತೆಗಳನ್ನು ಆರ್ಥಿಕ, ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಉಪಯೋಗಿಸಿ ಕೊಳ್ಳಬೇಕು ; ಅದನ್ನು ಸಹಕಾರ ಪದ್ಧತಿಯಂತೆ ಬೆಳೆಸಬೇಕು. ಸ್ವಸಂಪೂರ್ಣ, ಸುಸಂಘಟಿತ ಗ್ರಾಮಗಳ ರಚನೆ ನಮ್ಮ ಯೋಜನೆಯ ಗುರಿ. ಆಯಾ ಸ್ಥಳ ಮಾಡುವ ಕೆಲಸ ಅಲ್ಲಿಗೇ ಮಾತ್ರವೇ ಉಪಯುಕ್ತವಾಗಿದ್ದರೆ ಸಾಲದು. ಇಡೀ ಯೋಜನೆಗೆ ಹೊಂದಿಕೊಳ್ಳುವಂತಿರಬೇಕು. ಆ ಕೆಲಸ ಕಟ್ಟಕಡೆಯಲ್ಲಿ ನ್ಯಾಯಪೂರ್ಣ ಪ್ರಜಾತಂತ್ರದ ಸಾಮಾಜಿಕ ವ್ಯವಸ್ಥೆಯ ಸ್ಥಾಪನೆಗೆ ದೋಹದವಾಗಬೇಕು.

ಯೋಜನೆ ಎಂದರೇನು ? ಯೋಜನೆ ಎಂದರೆ ಒಂದು ಉದ್ದೇಶ್ಯ ಸಾಧನೆಗಾಗಿ ಕೆಲವು ಅಂಶಗಳನ್ನು ಒಟ್ಟುಗೂಡಿಸುವುದು, ಪೋಣಿಸುವುದು. ಭಾರತದಲ್ಲಿ ನಾವು ಯಾವ ಅಂಶಗಳನ್ನು ಪೋಣಿಸಬೇಕು ? ಇತರ ದೇಶಗಳಲ್ಲಿ ಇಲ್ಲದ ಅಂಶಗಳು ನಮ್ಮ ಯೋಜನೆಯಲ್ಲಿರಬಹುದು. ಆದುದರಿಂದ ರಷ್ಯಾದ ಯೋಜನೆಯಾಗಲಿ, ಇಂಗ್ಲೆಂಡ್ ಅಮೇರಿಕಗಳ ಯೋಜನೆಗಳಾಗಲಿ ನಮಗೆ ಮೇಲ್ಪಂಕ್ತಿಯಾಗಬೇಕಾಗಿಲ್ಲ. ಆ ದಾರಿ ನಮ್ಮನ್ನು ಗುರಿಗೆ ಒಯ್ಯಲಿಕ್ಕೂ ಇಲ್ಲ.

ಇಂಗ್ಲೆಂಡಿನ ಯೋಜನೆ ಎಂದಾಗ ಬಹಳ ಅಚ್ಚರಿಯಾಗುತ್ತದೆ. ಅದರ ಹೆಸರನ್ನೇ ಯಾರೂ ಕೇಳಿಲ್ಲ. ಇಂಗ್ಲೀಷರು ಯೋಜನೆಮಾಡರು : ಯೋಜನೆಯಂತೆ ಕೆಲಸ ಮಾಡುತ್ತಾರೆ. ಅದು ಅವರ ಪ್ರತಿಭೆ. ಪ್ರತಿಯೊಬ್ಬನು ಒಂದು ಯೋಜನೆಗೆ ಸರಿಯಾಗಿ ಕೆಲಸಮಾಡುವಂತೆ ಮಾಡುತ್ತಾನೆ .ಯೋಜನೆಗಳೇ ಇರದಿದ್ದರೆ ಇಂಗ್ಲಿಷ್ ಸಾಮ್ರಾಜ್ಯವು ಇರುತ್ತಿರಲಿಲ್ಲ. ಅವರ ಆರ್ಥಿಕ ವ್ಯೂಹಗಳು, ಸಾಮ್ರಾಜ್ಯ ವ್ಯಾಪಾರಮಾನ್ಯಗಳು. ಹಡಗಿನ ಪಡೆ, ನೌಕನೀತಿ—ಎಲ್ಲವು ಒಂದು ಯೋಜನೆಯೇ. ರಾಷ್ಟ್ರೀಯ ಯೋಜನೆಯಲ್ಲದಿರಬಹುದು. ಲಂಡನ್ ಯೋಜನೆ—ಬ್ಯಾಂಕ್ ಆಫ್ ಇಂಗ್ಲೆಂಡ್ ಯೋಜನೆಯೆ ಇರಬಹುದು : ಅಂತೂ ಯೋಜನೆಯೇ.

ರಷ್ಯಾದ್ದೊ ಅಮೇರಿಕದ್ದೊ ಇಂಗ್ಲೆಂಡಿನದೋ ಈ ಯೋಜನೆಗಳಿಗೆಲ್ಲ ಒಂದು ಹಿನ್ನೆಲೆಯಿದೆ. ಆ ಹಿನ್ನೆಲೆಯಲ್ಲಿರುವ ಅಂಶಗಳು ನಮ್ಮ ದೇಶದಲ್ಲಿರದಿದ್ದರೂ ಅದೇ ರೀತಿಯ ಯೋಜನೆಮಾಡಿದರೆ ನಮಗೆ ನಷ್ಟ ವಿಫಲತೆ ತಪ್ಪಿದ್ದಲ್ಲ.

ಕ್ರಿಯಾತ್ಮಕ ಯೋಜನೆ: ಹಿಂದುಸ್ಥಾನದಲ್ಲಿ ಬಡತನ, ಕೊಳಕು, ಕಾಯಿಲೆ, ಅಜ್ಞಾನ ತುಂಬಿವೆ. ಆದುದರಿಂದ ನಮ್ಮ ಯೋಜನೆ ಈ ಕೆಲಸಗಳನ್ನು ಮುಖ್ಯ ವಾಗಿ ಗಮನಿಸಬೇಕು :

೧. ವ್ಯವಸಾಯ ೨. ಗ್ರಾಮೋದ್ಯೋಗ ೩. ವಸತಿ, ಶುಚಿ, ಆರೋಗ್ಯ ೪. ಗ್ರಾಮ ಶಿಕ್ಷಣ ೫. ಗ್ರಾಮದ ವ್ಯವಸ್ಥೆ ೬. ಗ್ರಾಮ ಸಂಸ್ಕೃತಿ.

ಗುರಿ : ರಷ್ಯಾ ಮೊದಲು ಯೋಜನೆ ಮಾಡಿದಾಗ ಅದು ಜಾರ್

ದೊರೆಗಳ ಅಧೀನವಲ್ಲಿತ್ತು. ಶ್ರೀಮಂತರು ಐಶ್ವರ್ಯದಲ್ಲಿ ಮುಳುಗಿದ್ದರು. ಬಡವರ ಪಾಡು ನಾಯಿಪಾಡಾಗಿತ್ತು. ಸ್ವಾಭಾವಿಕವಾಗಿಯೆ ರೈತರು 'ನಮಗೆ ಅಧಿಕಾರ ಬಂದರೆ ನಾವು ಐಶ್ವರ್ಯದಲ್ಲಿ ಮುಳುಗಬೇಕು' ಎಂದರು ಐಶ್ವರ್ಯ ಎಂದರೆ ಹಲವಾರು ಬಗೆಯ ಭೋಗದಾಸೆ–ದೊಡ್ಡ ಅರಮನೆಗಳು. ಧನಧಾನ್ಯ ಸಮೃದ್ಧಿ, ವಿಲಾಸ–ಸುಖ ಇತ್ಯಾದಿ. ಅದೇ ಅವರ ಗುರಿ. ಅದಕ್ಕಾಗಿ ಅವರು ಪ್ರಯತ್ನಿಸಿದರು. ಅವರ ಯೋಜನೆ ಆ ಭೂಮಿಯಲ್ಲಿ ಮೊಳೆಯಿತು.

ಬಡತನವನ್ನು ತೊಲಗಿಸಬೇಕು ಎಂದು ಪದೇ ಪದೇ ಹೇಳುತ್ತಾರೆ. ಬಡತನ ಎಂದರೇನು ? ಯಾರೋ ಹೇಳಿದಂತೆ–ಬಡತನ ಎಂದರೆ ನಿಮಗೇನು ಬೇಕೋ ಅದರ ಅಭಾವ. ಆದರೆ ನಿಮಗೆ ಏನು ಬೇಕು ? ರೋಲ್ಸ್‌ರಾಯ್ಸ್ ಮೋಟಾರು ಬೇಕೆ ? ಅದಕ್ಕೆ ಅಭಾವವಾದರೆ ನೀವು ಬಡವರೇ ? ಒಬ್ಬ ಹುಡುಗಿಗೆ ತುಟಿಗೆಂಪಿನ ಡಬ್ಬಿ ಬೇಕು. ಅದನ್ನು ಕೊಳ್ಳಲು ಸಾಕಷ್ಟು ಹಣವಿಲ್ಲ. ಅವಳು ಬಡವಿಯೇ ? ನಮಗೆ ಬೇಕಾದುದರಲ್ಲಿ ಅನಿವಾರ್ಯವಾದ ಪ್ರಾಥಮಿಕ ಪದಾರ್ಥಗಳು ಇವೆ. ಕೆಲವು ಪದಾರ್ಥಗಳಿಲ್ಲದೆ ಮನುಷ್ಯ ಬದುಕಲೇ ಆರ. ಅವು ಅನಿವಾರ್ಯ. ಅವನ ದೇಹ ಇರಲು, ಅವನ ವ್ಯಕ್ತಿತ್ವ ಬೆಳಗಲು, ಅವು ಬೇಕೇಬೇಕು. ಇವು ಸ್ವಾಭಾವಿಕವಾದ ಅಗತ್ಯಗಳು. ಇವನ್ನು ನಾವು ತೃಪ್ತಿಪಡಿಸಲೇ ಬೇಕು, ಈ ಕೃತಕ ಚಟಗಳನ್ನಲ್ಲ. ಪ್ರಾಥಮಿಕ, ಮೂಲ ಅಗತ್ಯಗಳಲ್ಲಿ ಅತ್ಯಂತ ಮುಖ್ಯವಾದುದು ಯಾವುದು ? ಮೊದಲನೆಯದು ಅನ್ನ–ಆಹಾರ ಬಟ್ಟೆಯಿಲ್ಲದಿದ್ದರೂ ಬದುಕಬಹುದು, ಅನ್ನವಿಲ್ಲದೆ ಬದುಕಲಾರೆವು. ನಮ್ಮ ದೇಶದಲ್ಲೋ ಆಗೊಮ್ಮೆ ಈಗೊಮ್ಮೆ ಬರಬಡಿಯುತ್ತಿಲ್ಲ : ಪದೇ ಪದೇ ಕ್ಷಾಮ. ಆದುದರಿಂದ ನಮ್ಮ ಯೋಜನೆಯಲ್ಲಿ ಮೂಲಭೂತ ಅಂಶ ಈ ಪೀಡೆಯ ನಿವಾರಣೆ : ಆಹಾರೋತ್ಪತ್ತಿ. ಇದನ್ನು ಹೇಗೆ ಸಾಧಿಸಬೇಕು ? ಬಂಡವಾಳವನ್ನು ಚೆಲ್ಲಿಯೇ ? ಬಂಡವಾಳ ಹಾಕಿ ನೋಡಿ, ಇಷ್ಟು ಫಲ ಬರುತ್ತದೆ, ಎಂದು ಎಷ್ಟೋ ಜನ ಹೇಳುತ್ತಾರೆ. ಇಷ್ಟು ಬಂಡವಾಳ ಹಾಕಿದರೆ ಇಷ್ಟು ಹೆಚ್ಚು ಆಹಾರೋತ್ಪತ್ತಿಯಾಗುತ್ತದೆ ಎಂದು ಪಂಡಿತರು ಲೆಕ್ಕ ಕೊಟ್ಟಿದ್ದಾರೆ. ನೆಲದಲ್ಲಿ ಹಣ ಸುರಿದರೆ ಸಾಕು, ಕೈಗೆ ಬೆಳೆ ಎದ್ದು ಬರುತ್ತದೆಯೇನೋ !

ನಮ್ಮ ದೇಶದಲ್ಲಿ ಉತ್ಪಾದನೆಯ ಮುಖ್ಯ ಅಂಶ. ಮಹತ್ತರ ಅಂಶ ಮಾನವ–ಪರಿಶ್ರಮ. ನಮಗೆ ಬೇಕಾದುದನ್ನು ಉತ್ಪತ್ತಿ ಮಾಡಿಕೊಳ್ಳಲು, ನಮ್ಮ ಹಸಿವನ್ನು ಹಿಂಗಿಸಲು ಈ ಬೃಹತ್ ಅಂಶವನ್ನು ಬಳಸಬೇಕು.

ಉತ್ಪಾದನೆಯ ವಿಧಾನದ ಬಗ್ಗೆ ಜನರಲ್ಲಿ ಒಂದು ಭಾವನೆ ಹರಡಿದೆ : ಆಧುನಿಕ ಯಂತ್ರಗಳನ್ನು ತಂದು ದೊಡ್ಡ ದೊಡ್ಡ ಕೇಂದ್ರೀಯ ಉದ್ಯೋಗಗಳನ್ನು ಗಿರಣಿಗಳನ್ನು ಸ್ಥಾಪಿಸಿದರೆ ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಈ

ವಿಚಾರಕ್ಕೆ ಮುಣಿಯುವ ಮೊದಲು ಅದನ್ನು ಸೂಕ್ಷ್ಮವಾಗಿ ಪರಿಶೀಲಿಸ ಬೇಕು. ಆರ್ಥಿಕ ಉತ್ಪಾದನೆಯ ವ್ಯವಸ್ಥೆ ಮಾಡಲು ಅನೇಕ ಅಂಶಗಳನ್ನು ಒಟ್ಟಿಗೆ ಸೇರಿಸಿ ಸರಿಯಾಗಿ ಜೋಡಿಸಬೇಕು. ಆ ಅಂಶಗಳಲ್ಲಿ ಮುಖ್ಯವಾದವು ಪ್ರಾಕೃತಿಕ ಸಾಧನಗಳು. ಬಂಡವಾಳದ ಏರ್ಪಾಟು, ಶ್ರಮ. ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಇವನ್ನು ಬೇರೆ ಬೇರೆ ಪ್ರಮಾಣದಲ್ಲಿ ಜೋಡಿಸಬೇಕು. ಇಂಗ್ಲೆಂಡಿನಲ್ಲಿ ಔದ್ಯೋಗಿಕ ಕ್ರಾಂತಿಯಾದಾಗ ಬಂಡವಾಳ ಸಮೃದ್ಧಿಯಾಗಿತ್ತು. ಆದುದರಿಂದ ಅವರ ಉತ್ಪಾದನೆಯ ಪದ್ಧತಿಯಲ್ಲಿ ಬಂಡವಾಳದ ಪ್ರಭಾವ ಹೆಚ್ಚು, ಅಮೇರಿಕದಲ್ಲಿ ದುಡಿಯುವ ಜನ ಕಡಿಮೆ. ಪ್ರಾಕೃತಿಕ ಸಾಧನ ಸಾಮಗ್ರಿ ಯಥೇಷ್ಟವಾಗಿತ್ತು. ಆದುದರಿಂದ ಅವರು ಸ್ವಲ್ಪ ದುಡಿದರೆ ಹೆಚ್ಚು ಫಲ ಬರುವ ಉಪಾಯ ಕಂಡುಹಿಡಿದರು : ಯಂತ್ರಗಳು ಬಂದವು. ಆ ರೀತಿಯ ಆರ್ಥಿಕ ವ್ಯವಸ್ಥೆಯನ್ನು ಮಾಡಿದರೆ ಹೆಚ್ಚು ದುಡಿತವೆ ಬೇಕಾಗದಂಥ ಸ್ಥಿತಿ ಬರುತ್ತದೆ. ಎಂದರೆ ದುಡಿತವಿಲ್ಲದಾಗಿ ನಿರುದ್ಯೋಗ ಹೆಚ್ಚುತ್ತದೆ. ಆದುದರಿಂದ ಬಂಡವಾಳ ಕಡಿಮೆ, ದುಡಿಯುವ ಜನ ಹೆಚ್ಚು ಇರುವ ನಮ್ಮ ದೇಶದಲ್ಲಿ ಇಂಗ್ಲೆಂಡ್ ಅಮೇರಿಕೆಗಳ ರೀತಿ ಅಸಂಗತವಾಗುತ್ತದೆ.

ಮನುಷ್ಯನೇ ಒಂದು ಸೂಕ್ಷ್ಮ, ಕುಶಲತರ ಯಂತ್ರ. ಜಡ ಯಂತ್ರಕ್ಕೂ ಮನುಷ್ಯನಿಗೂ ಒಂದು ಭೇದವಿದೆ. ಯಂತ್ರದ ಹಾಗಲ್ಲದೆ ದುಡಿಯಲಿ ಬಿಡಲಿ ಮನುಷ್ಯನಿಗೆ ಹೊಟ್ಟೆಗೆ ಹಾಕುತ್ತಿರಬೇಕು. ಒಂದು ವೇಳೆ ಯಾಂತ್ರಿಕ ಉಪಕರಣಗಳಿಂದಲೇ ದಿನ ಬಳಕೆಯ ಪದಾರ್ಥಗಳನ್ನು ನಿರ್ಮಿಸಿದರೂ ಮನುಷ್ಯರ ಹೊಟ್ಟೆಗೆ ಹಾಕುವುದೇನು ತಪ್ಪದು . ಆದುದರಿಂದ ನಮ್ಮಲ್ಲಿ ಮುಖ್ಯವಾಗಿ ಇರುವ ಅಂಶಗಳನ್ನು ಸರಿಯಾಗಿ ಸಾರ್ಥಕವಾಗಿ ಉಪಯೋಗಿಸಬೇಕಾದರೆ, ನಮ್ಮ ದೇಶದ ಉತ್ಪಾದನಾ ಕ್ರಮದಲ್ಲಿ ವಿಶೇಷವಾಗಿ ಮನುಷ್ಯ-ಬಲವನ್ನು ಉಪಯೋಗಿಸುವ ಪದ್ಧತಿ ಸರ್ವ ಸಾಮಾನ್ಯವಾಗಬೇಕು. ಈ ಪದ್ಧತಿಯನ್ನು ಅನುಸರಿಸದಿದ್ದರೆ ನಮ್ಮ ದೇಶದ ಅಪಾರ ಸಂಪತ್ತನ್ನು ಕಡಲಿಗೆ ಸುರಿದ ಪಾಪಕ್ಕೆ ನಾವು ಗುರಿಯಾಗುತ್ತೇವೆ. ಹಾಗೆ ಮಾಡಿದರೆ ಎಂದಿಗೂ ನಮಗೆ ಪುರೋಭಿವೃದ್ಧಿಯಿಲ್ಲ.

ಬರೀ ಪದಾರ್ಥಗಳ ಉತ್ಪತ್ತಿಯಿಂದಲೇ ಒಂದು ರಾಷ್ಟ್ರ ಸುಖವಾಗಿ ಕ್ಷೇಮವಾಗಿ ಇರಲಾರದು. ಜನರಿಗೆ ಬೇಕಾದುದನ್ನು ಒದಗಿಸುವ ಕೆಲಸದಲ್ಲಿ ಮಾತ್ರ ಉತ್ಪಾದನೆಯ ಪ್ರಾಧಾನ್ಯ. ಆದುದರಿಂದ ಜನರು ತಮಗೆ ಬೇಕಾದ ಪದಾರ್ಥಗಳನ್ನು ತಾವೇ ಉತ್ಪತ್ತಿ ಮಾಡಿಕೊಳ್ಳುವಂತೆ ಸಮಾಜವನ್ನು ರೂಪುಗೊಳಿಸಬೇಕಾದುದು ಮೊದಲನೆಯ ಕೆಲಸ. ಅವರ ಹೊಟ್ಟೆಗೆ ಸಾಕಾಗುವಷ್ಟು ಆಹಾರ, ಚಳಿ, ಮಳೆಗಳ ಬಾಧೆಗೆ ತಡೆದುಕೊಳ್ಳಲುಬಟ್ಟೆ, ಇರಲು ತಕ್ಕ ವಸತಿ-ಇವನ್ನು ಅವರು ಮಾಡಿಕೊಳ್ಳಬೇಕು. ಆಮೇಲೆ, ಅವರಿಗೆ ಔಷಧೋಪಚಾರ. ಶಿಕ್ಷಣ, ಇತರ ಸಾಮಾಜಿಕ ಅನುಕೂಲತೆಗಳನ್ನು ಒದಗಿಸಿ ಕೊಟ್ಟು ಜನರ ದೈಹಿಕ

ಮಾನಸಿಕ ನೈತಿಕ ಯೋಗಕ್ಷೇಮಕ್ಕೆ ಏರ್ಪಾಟು ಮಾಡಬೇಕು. ಈ ಮೂಲಭೂತ ಅಗತ್ಯಗಳನ್ನು ತೃಪ್ತಿಗೊಳಿಸುವ ಮೊದಲೇ ಪರದೇಶಗಳಲ್ಲಿ ವ್ಯಾಪಾರ ಮಾಡಲು ಪದಾರ್ಥಗಳನ್ನು ಉತ್ಪತ್ತಿ ಮಾಡುವುದು ಮೂರ್ಖತನ. ಬರೀ ಹಣಕ್ಕೇನು ಯೋಗ್ಯತೆ ? ಯಾರಿಗೆ ತೃಪ್ತಿ ? ಹಣವನ್ನೆಣಿಸುವ ಲೋಭಿಯು ಆಸೆಯೊಂದು ತೃಪ್ತಿಯಾದೀತು. ಹಣವೇ ಗುರಿಯಲ್ಲ. ಜನರಿಗೆ ಕೈ ತುಂಬಾ ಹಣ ಸಿಗುವಂತೆ ಮಾಡಿ ಅವರು ಹೊಟ್ಟೆಗಿಲ್ಲದೇ ಒಣಗುವಂತೆ ಮಾಡಿದರೆ ನಮ್ಮ ವ್ಯವಸ್ಥೆ ಅವಿವೇಕದ್ದು ಎನಿಸಿಕೊಳ್ಳುತ್ತದೆ. ಆದುದರಿಂದ ಮೊಟ್ಟ ಮೊದಲು ಜನರಿಗೆ ಸಮೃದ್ಧಿಯಾಗಿ ಅನ್ನ, ಧಾರಾಳವಾಗಿ ಬಟ್ಟೆ, ಅನುಕೂಲವಾಗಿ ಮನೆ ಸಿಗುವಂತೆ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ. ಇವೆಲ್ಲವೂ ಸಾಕಷ್ಟು ತೃಪ್ತಿಯಾದ ಮೇಲೆ ಉಳಿದ ಉತ್ಪಾದನೆ. ದೇಶದ ಆರ್ಥಿಕ ವ್ಯವಹಾರವನ್ನು ಈ ದಾರಿಗೆ ತಿರುಗಿಸುವುದು ಸರಕಾರದ ಕೆಲಸ. ಇಲ್ಲದಿದ್ದರೆ ಅದಕ್ಕೆ ಆ ಹೆಸರೇ ಸಲ್ಲದು.

ಬರೀ ದೈಹಿಕ ಅವಶ್ಯಕತೆಗಳ ತೃಪ್ತಿಯಾದರೆ ಸಾಲದು. ಜನರಲ್ಲಿ ಸ್ವಸಹಾಯ, ಪರಸ್ಪರ ಸಹಕಾರ, ಸಾಮಾಜಿಕ ಸಂಘಟನೆಯ ಅರಿವು ಮೂಡುವಂತೆ ಮಾಡಬೇಕು. ಇದನ್ನು ಮಾಡಿದರೆ ಸ್ವಸಂಪೂರ್ಣತೆಯ ಮೂಲಕ ಸ್ವರಾಜ್ಯದ ಹಾದಿಯಲ್ಲಿ ಬಹಳ ದೂರ ಸಾಗಿಹೋದಂತೆ.

ಇನ್ನೊಂದು ಮಾತನ್ನು ನೆನಪಿಡಬೇಕು. ನಮ್ಮ ಯೋಜನೆ ಕೆಲವರಿಗಾಗಿ ಮಾತ್ರವಲ್ಲ, ದೇಶದಲ್ಲಿರುವ ಪ್ರತಿಯೊಬ್ಬ ಮನುಷ್ಯನಿಗೂ. ನಾವು ಮಾಡುವ ಯೋಜನೆ ಸಾರ್ಥಕವಾಗಬೇಕಾದರೆ ಭಾರತದ ಪ್ರತಿಯೊಬ್ಬ ಜೀವಂತ ಮನುಷ್ಯನಿಗೂ ಸಂಬಂಧಿಸಿದುದಾಗಿರಬೇಕು. ಬಂಡವಾಳ ಅಭಾವವಾದ ಈ ಬಡದೇಶದಲ್ಲಿ ಹೀಗೆ ವಿಶಾಲವಾಗಿ ಮಾಡಿದ ಯೋಜನೆ ಎಲ್ಲಿಂದಲೋ ಬಂಡವಾಳ ಬರುತ್ತದೆ ಎಂಬ ಭರವಸೆಯಿಂದಿರಬಾರದು. ಬಂಡವಾಳದ ತಳಹದಿಯ ಮೇಲೆ ಹಾಕಿದ ಯೋಜನೆಗಳು ಭಾರತದಲ್ಲಿ ಅಸಂಬದ್ಧ. ಹಾಗೆಯೇ ಪ್ರಾಥಮಿಕ ಅಗತ್ಯವಾದ ಆಹಾರವನ್ನು ಒದಗಿಸುವ ಯೋಜನೆ ಮಾಡದ, ಭಾರತದ ಅಖಂಡ ಶ್ರಮ ಸಂಪತ್ತನ್ನು ಉಪಯೋಗಿಸದ, ಯಾವ ಯೋಜನೆಯೂ ಸುಸಂಗತವಲ್ಲ. ಪಶ್ಚಿಮ ದೇಶದ ಯೋಜನೆಗಳೆಲ್ಲವು ಪದಾರ್ಥ ಪ್ರಧಾನ, ಪ್ರಕೃತಿ ಸಂಪತ್ತನ್ನು ಬಾಚಿಕೊಳ್ಳಬೇಕೆಂಬುದು ಅವರ ಉದ್ದೇಶ. ಏತಕ್ಕಾಗಿಯೋ ? ಅವರಿಗೆ ಅದು ಗೊತ್ತಿಲ್ಲ. ಕುರ್ಚಿ–ಮೇಜುಗಳು ನಮ್ಮ ಪ್ರಾಥಮಿಕ ಅವಶ್ಯಕತೆಗಳನ್ನು ತೃಪ್ತಿ ಪಡಿಸುತ್ತವೆಯೇ?

ಭಾರತಕ್ಕೆ ಯೋಜನೆ ಮಾಡಬೇಕೆಂದರೆ ಅದು ಮೊಟ್ಟಮೊದಲು ರೈತನ ಸುತ್ತಲು ಹರಡಬೇಕು. ಆಮೇಲೆ ಅಲ್ಲಿಂದ ಇಡೀ ದೇಶಕ್ಕೆ ವ್ಯಾಪಿಸಬಹುದು. ಕಡೆಗೂ ನಾವು ಇಂಗ್ಲೆಂಡು, ಅಮೇರಿಕಗಳಷ್ಟು ಹಣಗಾರರಾಗದಿರಬಹುದು.

೨೨ ನೇ ಪುಟ ನೋಡಿ

ಸಂಪೂರ್ಣ ಕ್ರಾಂತಿ ವಿದ್ಯಾಲಯ, ವೇಡಛಿ :

ಸೂರತ್, ಗುಜರಾತ್ 194641

ಪ್ರಶಿಕ್ಷಣದ ಕರೆ

ಸಂಪೂರ್ಣ ಕ್ರಾಂತಿ ವಿದ್ಯಾಲಯವನ್ನು ಶ್ರೀ ನಾರಾಯಣ ದೇಸಾಯಿಯವರು ಕಳೆದ ೫–೬ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಸರ್ವೋದಯ ಸಿದ್ಧಾಂತದ ಆಧಾರದ ಮೇಲೆ ಸಮಾಜದ ಬದಲಾವಣೆಯ ಕೆಲಸದಲ್ಲಿ ತೊಡಗ ಬಯಸುವ ಯುವಕರಿಗೆ ವೈಚಾರಿಕ ದೃಢತೆಯನ್ನು ತಂದು ಕೊಡುವ ಉದ್ದೇಶ್ಯ ಈ ವಿದ್ಯಾಲಯದ್ದಾಗಿದೆ. ಪ್ರತಿ ಹತ್ತು ತಿಂಗಳಿಗೊಮ್ಮೆ ಹೊಸ ತರಗತಿ ಪ್ರಾರಂಭವಾಗುತ್ತದೆ. ಈಗ ೧೬–೮–೯೦ ರಿಂದ ಪ್ರಾರಂಭವಾಗಲಿರುವ ತರಗತಿಯ ವಿವರಗಳನ್ನು ಈ ಕೆಳಗೆ ಕಾಣಿಸಲಾಗಿದೆ. ಕರ್ನಾಟಕದ ಯುವಕರು ಈ ಸದಾವಕಾಶ ಉಪಯೋಗಿಸಿಕೊಳ್ಳಲಿ.

ಪ್ರಶಿಕ್ಷಣ ಯಾರಿಗಾಗಿ?

೧. ಯಾರಿಗೆ ತಮ್ಮ ಗುಣ ವಿಕಾಸವಾಗಬೇಕಾಗಿದೆಯೋ

೨. ಯಾರು ಸಮಾಜ ಪರಿವರ್ತನೆಯಲ್ಲಿ ಸಹಾಯ ಮಾಡಬಯಸುತ್ತಾರೋ

೩. ಯಾರು ಪ್ರಮಾಣಪತ್ರ ಅಥವಾ ಕೆಲಸವನ್ನು ಹುಡುಕುತ್ತಿಲ್ಲವೋ

೪. ಯಾರು ಸೇವೆ, ತ್ಯಾಗ ಮತ್ತು ಕ್ರಾಂತಿಯ ಅವಕಾಶವನ್ನು ಹುಡುಕುತ್ತಿದ್ದಾರೋ ಅಂಥವರಿಗಾಗಿ.

ಪ್ರವೇಶಕ್ಕಾಗಿ ಅವಶ್ಯಕ ನಿಯಮಗಳು

೧. ಅಹಿಂಸೆಯಲ್ಲಿ ವಿಶ್ವಾಸ ೨. ಶರೀರ ಶ್ರಮದ ಸಿದ್ಧತೆ

೩. ಹಿಂದಿ ಭಾಷೆಯ ಜ್ಞಾನ

ಶಿಕ್ಷಣ ಪದ್ಧತಿಯ ವಿಶೇಷಗಳು

೧. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಪಠ್ಯಕ್ರಮವನ್ನು ತನ್ನ ರುಚಿಗೆ ಅನುಸಾರವಾಗಿ ಅಧ್ಯಾಪಕರ ಸಲಹೆ ಮೇರೆಗೆ ರಚಿಸುತ್ತಾನೆ.

೨. ವಿದ್ಯಾರ್ಥಿಗಳೇ ವಿದ್ಯಾಲಯದ ಅಡಿಗೆ ಮನೆ, ವ್ಯವಸಾಯ, ತೋಟಗಾರಿಕೆ ಇತ್ಯಾದಿಗಳನ್ನು ನೋಡಿಕೊಳ್ಳುತ್ತಾರೆ.

೩. ವಿದ್ಯಾರ್ಥಿಗಳು ಮುಕ್ತ ವಾತಾವರಣದಲ್ಲಿ ಶಿಸ್ತುಪಾಲನೆಗಾಗಿ ಸ್ವಯಂ ಪ್ರಯತ್ನಿಸುತ್ತಾರೆ.

ವಿದ್ಯಾಲಯದಲ್ಲಿ ಏನನ್ನು ಕಲಿಸಿಕೊಡಲಾಗುತ್ತದೆ.

೧. ಸಂಪೂರ್ಣ ಕ್ರಾಂತಿಯ ದರ್ಶನ ಮತ್ತು ಪ್ರಕ್ರಿಯೆ
೨. ಸಮಾಜದಲ್ಲಿ ಪರಿವರ್ತನೆಯ ಪ್ರಕ್ರಿಯೆ. ಹಾಗೆಯೇ ಅಹಿಂಸಾ ಕ್ರಾಂತಿಯ ಮೀಮಾಂಸೆ
೩. ರಾಷ್ಟ್ರದ ಪ್ರಮುಖ ಸಂಸ್ಥೆಗಳ ವಿಷಯವಾಗಿ ತಿಳಿದುಕೊಳ್ಳುವುದು.
೪. ವಿಶ್ವ ಕ್ರಾಂತಿಯ ಸಮಸ್ಯೆ
೫. ಪರ್ಯಾವರಣ, ಉಪಯುಕ್ತ ತಾಂತ್ರಿಕತೆ, ಶಕ್ತಿ, ಅಣು ಮುಂತಾದವು.
೬. ಭಾರತೀಯ ಸಂಸ್ಕೃತಿ ಹಾಗೂ ಸ್ವಾತಂತ್ರ್ಯ ಇತಿಹಾಸದ ಪರಿಚಯ.
೭. ಗ್ರಾಮದ ಆರೋಗ್ಯ ಮತ್ತು ಪೋಷಣೆ

ವಿದ್ಯಾಲಯದಲ್ಲಿ ಸೇರುವುದರ ಅರ್ಥವೆಂದರೆ ಬೇರೆ–ಬೇರೆ ಪ್ರದೇಶಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಜೊತೆ ವಾಸ ಮಾಡಿ ತಮ್ಮ ಸ್ವಪ್ರಯತ್ನದಿಂದ ಕುಶಲತೆ ಮತ್ತು ತಿಳುವಳಿಕೆ ಹೆಚ್ಚಿಸಿಕೊಳ್ಳುವ ಅವಕಾಶವೇ ಆಗಿದೆ,

ಮೂರು ರೂಪಾಯಿ ಕಳುಹಿಸಿ ಆವೇದನಾ ಪತ್ರವನ್ನು ತರಿಸಿಕೊಳ್ಳಿ ಮತ್ತು ಸ್ವೀಕೃತಿ ಪತ್ರ ಸಿಕ್ಕಿದ ಮೇಲೆ ವೇಡಛಿಗೆ ಹೋಗುವುದಕ್ಕೆ ಸಿದ್ಧರಾಗಿ.

— ★ —

೧೨ ನೇಪುಟದಿಂದ .... ಶಾಶ್ವತ ಅರ್ಥಶಾಸ್ತ್ರ

ಆದರೆ ಆಹಾರ ಸಮೃದ್ಧರಾಗುತ್ತೇವೆ. ಐದು ವರ್ಷದ ಕೆಳಗೆ ಇಂಗ್ಲೆಂಡು ಹೊಟ್ಟೆಗೆ ಇಲ್ಲದೆ ತೊಳಲುತ್ತಿತ್ತು.

ಆದುದರಿಂದ ಹಿಂದುಸ್ಥಾನಕ್ಕೆ ಯಾವ ಯೋಜನೆಯನ್ನೇ ಮಾಡಲಿ, ಅನ್ನ–ಬಟ್ಟೆಗಳ ಸ್ವಸಂಪೂರ್ಣತೆ ಅದರ ಮುಖ್ಯ ಲಕ್ಷಣವಾಗಿರಬೇಕು. ಪ್ರತಿಯೊಂದು ಹಳ್ಳಿಯು ಅನ್ನ ಬಟ್ಟೆಗಳಲ್ಲಿ ಸ್ವಸಂಪೂರ್ಣವಲ್ಲದಿದ್ದರೆ ಸ್ವರಾಜ್ಯವಿದ್ದು ಪ್ರಯೋಜನ ವಿಲ್ಲ. ಪ್ರತಿಯೊಬ್ಬರಿಗೂ ಸಾಕಾಗುವಷ್ಟು ಅನ್ನ ಬಟ್ಟೆ ಸಿಗುವ ಭರವಸೆ ಕೊಡಬೇಕು. ಹಾಗೆ ಮಾಡದಿದ್ದರೆ ಅದು ನಮ್ಮ ದೇಶಕ್ಕೆ ತಕ್ಕ ಯೋಜನೆಯಲ್ಲ. ಟಾಟಾ–ಬಿರ್ಲಾ ಯೋಜನೆಗೆ, ಅದರಂತಾ ಯೋಜನೆಗಳಿಗೆ ಅಷ್ಟು ಹಣ ಬೇಕಾಗಿಲ್ಲ. ನಮ್ಮಲ್ಲಿರುವ ಪದಾರ್ಥ ಮುಖ್ಯವಲ್ಲವಲ್ಲ ನಮ್ಮ ಯೋಜನೆಯಲ್ಲಿ. ನಮ್ಮ ಜನರ ಚಟುವಟಿಕೆಯನ್ನು, ಕೆಲಸವನ್ನು ಮತ್ತೆ ಸರಿಯಾದ ದಾರಿಗೆ ತಿರುಗಿಸುತ್ತಿ ದೇವೆ. ಅವರಿಗೆ ಮಾರ್ಗದರ್ಶನ ಮಾಡುತ್ತೇವೆ. ಅವರ ಸಹಜ ಕಾರ್ಯಗಳನ್ನೇ ನಿಯಮಗೊಳಿಸುತ್ತಿದೇವೆ. ಈ ಮೂಲಕ ಕೋಟಿಗಟ್ಟಲೆ ಜನರ ಕಾರ್ಯಶಕ್ತಿಯನ್ನು ಉಚಿತ, ಅಪೇಕ್ಷಣೀಯ ಮಾರ್ಗದಲ್ಲಿ ನಡೆಸುತ್ತೇವೆ.★

ಧ್ಯಾನ ಮತ್ತು ಕರ್ಮ

—ವಿನೋಬಾ

ವ್ಯಕ್ತಿಗತ ಧ್ಯಾನದ ಅವಶ್ಯಕತೆಯಂತೂ ಇದ್ದೇ ಇದೆ. ಆದರೆ ಅದಕ್ಕಿಂತಲೂ ಹೆಚ್ಚು ಮಹತ್ವದ ಮಾತೆಂದರೆ, ನಮ್ಮ ಎಲ್ಲ ಕೆಲಸವೂ ಧ್ಯಾನಸ್ವರೂಪವಾಗಿರಬೇಕು. ಉದಾಹರಣೆಗಾಗಿ ನಾನು ದಿನಾಲು ಒಂದು-ಒಂದೂವರೆ ಗಂಟೆ, ಕೆಲವೊಮ್ಮೆ ಎರಡುವರೆ ಗಂಟೆಯ ಕಾಲ ಸ್ವಚ್ಛತೆಯ ಕೆಲಸವನ್ನು ಮಾಡುತ್ತೇನೆ. ಸ್ವಚ್ಛತೆ ಮಾಡುವ ಕಾಲಕ್ಕೆ ಒಂದೊಂದು ಕಡ್ಡಿ, ಎಲೆ, ಕಸ, ಎತ್ತುತ್ತೇನೆ ಮತ್ತು ಬುಟ್ಟಿಯಲ್ಲಿ ಹಾಕುತ್ತೇನೆ. ಆಗ ನನಗೆ ಆಗುವ ಅನುಭವ ಸುಂದರವಾದ ಧ್ಯಾನದ ಅನುಭವದಂತೆ ಇರುತ್ತದೆ. ಜಪಮಾಲೆ ಹಿಡಿದು ಜಪ ಮಾಡುವಾಗ ಆಗುವ ಅನುಭವಕ್ಕಿಂತ ಕಡಿಮೆ ಏನೂ ಈ ಪ್ರಕಾರದ ಕೆಲಸದಲ್ಲಿ ಅನುಭವ ಆಗುವುದಿಲ್ಲ. ಇಷ್ಟೇ ಅಲ್ಲ ಇನ್ನೂ ಉನ್ನತವಾಗಿರುತ್ತದೆ. ಒಂದೊಂದು ಕಡ್ಡಿಯನ್ನು ಎತ್ತುತ್ತಾ ನಾಮಸ್ಮರಣೆಯನ್ನು ಮಾಡುವುದು. ನಾನು ಕೆಲವೊಂದು ಸಲ ಎಣಿಕೆ ಕೂಡ ಮಾಡುತ್ತೇನೆ. ಇಂದು ೧೨೨೫ ಕಡ್ಡಿಯನ್ನು ಎತ್ತಿದೆ. ಅದರಲ್ಲಿ ಮನಸ್ಸು ಕೆಲಸ ಮಾಡುವುದಿಲ್ಲ. ಅದು ಒಂದು ಧ್ಯಾನಯೋಗವೇ ಆಗಿದೆ. ಯಾವ ಮನುಷ್ಯ ಹೊರಗಿನ ಕಸವನ್ನು ಸ್ವಲ್ಪವೂ ಸಹಿಸುವುದಿಲ್ಲವೊ ಆತ ಒಳಗಿನ ಕಸವನ್ನು ಸಹಿಸುವುದಿಲ್ಲ. ಒಳಗಿನ ಕಸವನ್ನು ತೆಗೆಯುವುದಕ್ಕೆ ಅವನಿಗೆ ಬಲವಾದ ಪ್ರೇರಣೆ ದೊರೆಯುತ್ತದೆ. ಇದು ಆಧ್ಯಾತ್ಮಿಕ ಪರಿಣಾಮ, ಪ್ರತಿಯೊಬ್ಬರಿಗೂ ಇಂಥದೇ ಪ್ರೇರಣೆ ದೊರೆಯುತ್ತದೆ ಎಂದು ಹೇಳಲಾಗುವುದಿಲ್ಲ, ಆದರೆ ತನ್ಮಯರಾಗಿ ಈ ಕೆಲಸವನ್ನು ಮಾಡಿದಾಗ ಅವನಿಗೆ ಧ್ಯಾನಯೋಗ ಲಭಿಸಬಹುದು.

ಅಂದರೆ, ಕೆಲಸ ಉತ್ತಮವಾಗಿರಬೇಕು. ಕೆಲಸ ಮಾಡುವಾಗ ಧ್ಯಾನವೇ ನಡೆಯಬೇಕು. ಮನಸ್ಸಿನ ಪೂರ್ಣ ಏಕಾಗ್ರತೆ ಇರಬೇಕು. ಧ್ಯಾನವಿಲ್ಲದೆ ಅದು ಸಾಧ್ಯವಿಲ್ಲ. 'ತಸ್ಮಾತ್ ತೇ ಇಹ ಮನುಷ್ಯಾಣಾಂ ಮಹತ್ತಾಂ ಪ್ರಾಪ್ನುವಂತಿ ಧ್ಯಾನಾಪಾದಾಂಶ ಇವೈವ ತೇ ಭವಂತಿ' – ಯಾರು ಪ್ರಪಂಚದಲ್ಲಿ ಯಾವುದೇ ಮಹತ್ವವನ್ನು ಪಡೆದಿರುತ್ತಾರೋ ಅದು ಅವರಿಗೆ ಧ್ಯಾನದ ಕಾರಣದಿಂದಲೇ ಪ್ರಾಪ್ತ

ವಾಗಿರುತ್ತದೆ. ಉಪನಿಷತ್ ಪ್ರಕಾರ ಪೃಥ್ವಿ ಧ್ಯಾನ ಮಾಡುತದೆ. ಅಂತ ರಿಕ್ಷವು ಧ್ಯಾನ ಮಾಡುತ್ತದೆ. ಧ್ಯಾನದಿಂದಲೇ ಅವುಗಳ ಮಹತ್ವ ಹೆಚ್ಚಿದೆ. ತಸ್ಮಾತ್ ಧ್ಯಾನಂ ಉಪಾಸ್ವೇತಿ ಧ್ಯಾನವಿಲ್ಲದೆ ಒಂದು ಕೆಲಸವೂ ಕೂಡ ಈಡೇರುವುದಿಲ್ಲ. ಕೆಲಸದಲ್ಲಿಯ ತನ್ಮಯತೆಯೇ ನಮ್ಮ ಧ್ಯಾನ.

ಯಾವ ಕೆಲಸವೂ ಇಲ್ಲ, ಧ್ಯಾನಕ್ಕಾಗಿ ಕುಳಿತುಕೊಂಡಾಗ ಏನಾಗುತ್ತದೆ? ಕಬೀರ್ ವರ್ಣಿಸಿದ್ದಾರೆ – "ಕೈಯಲ್ಲಿ ಜಪಮಾಲೆ ಸುತ್ತುತ್ತದೆ" ಕೈಯಲ್ಲಿ ಮಾಲೆ ಸುತ್ತುತ್ತಿದೆ, ಬಾಯಲ್ಲಿ ನಾಲಿಗೆ ಸುತ್ತುತ್ತಿದೆ ಮತ್ತು ಮನಸ್ಸು ಪ್ರಪಂಚದಲ್ಲೆಲ್ಲಾ ಸುತ್ತುತ್ತಿದೆ. ಧ್ಯಾನಕ್ಕಾಗಿ ಆಲಂಬನೆ ಬೇಕಾಗುತ್ತದೆ. ಕೆಲಸವು ಧ್ಯಾನಕ್ಕಾಗಿ ಆಲಂಬನೆ ಇದೆ.

ಆಧ್ಯಾತ್ಮಿಕ ಜೀವನವೆಂದರೆ ಪ್ರವೃತ್ತಿ ಕಡಿಮೆ ಮಾಡುವುದಲ್ಲ ಬದಲಿಗೆ ವೃತ್ತಿ ಕಡಿಮೆ ಮಾಡುವುದು. ಕಾಮ, ಕ್ರೋಧ, ಲೋಭ, ಮುಂತಾದ ವೃತ್ತಿಗಳು ಉದ್ಭವಿಸುತ್ತಿರುತ್ತದೆ. ಅವುಗಳನ್ನು ಕಡಿಮೆ ಮಾಡಬೇಕು. ಆಧ್ಯಾತ್ಮದಲ್ಲಿ ಪ್ರವೃತ್ತಿ ಬಾಧಕವಾಗುವುದಿಲ್ಲ, ವೃತಿ ಬಾಧಕವಾಗುತ್ತದೆ. ಮೊದಲು ಅಸತ್ ವೃತ್ತಿಯನ್ನು ತೆಗೆದು ಹಾಕಬೇಕು, ಸತ್ ಇಟ್ಟುಕೊಳ್ಳಬೇಕು. ನಂತರ ಸತ್ ಕೂಡ ತೆಗೆದು ಹಾಕಬೇಕು. ಅಭ್ಯಾಸವಾದ ನಂತರ ಸತ್ ವೃತ್ತಿಗಳು ತಮ್ಮಷ್ಟಕ್ಕೆ ತಾವೇ ಅಸ್ತವಾಗುತ್ತವೆ.

ಮನಸ್ಸಿನ ಏಕಾಗ್ರತೆ ಬಹಳ ದೊಡ್ಡ ಮಾತೇನಲ್ಲ. ಮನಸ್ಸಿನ ಎಚ್ಚರಿಕೆ ದೊಡ್ಡ ಮಾತು, ಹೇಗೆ ಅನೇಕಾಗ್ರತೆ ಶಕ್ತಿಯೋ ಹಾಗೆಯೇ ಏಕಾಗ್ರತೆ ಕೂಡ ಶಕ್ತಿ, ಅದು ಆಧ್ಯಾತ್ಮಿಕ ವಿಷಯವಲ್ಲ. ಮನಸ್ಸು ಯಾವಾಗಲು ಸಾವಧಾನವಾಗಿದೆ ಎಂದರೆ ಅನು ತನ್ನ ಸ್ಥಾನದಲ್ಲಿದೆ. ಈ ರೀತಿಯೇ ಇರಬೇಕು. ನಾನು ಈಗ ಮಾತನಾಡುತ್ತಿದ್ದೇನೆ, ಆದರೂ ಕೂಡ ಮನಸ್ಸಿನಲ್ಲಿ ಯಾವುದೇ ವಿಕಾರವಾದ ವಿಚಾರ ಬರುವುದಿಲ್ಲವೆಂಬ ಭರವಸೆ ಇಲ್ಲ. ಗಟ್ಟಿಯಾಗಿ ಉತ್ತರ ಕೊಡಬೇಕಾಗಿ ಬಂದರೂ, ಅಥವ ಪ್ರಹಾರ ಮಾಡಬೇಕಾಗಿ ಬಂದರೂ ಒಳಗೆ ಯಾವುದೇ ಕಲಹ ಉಂಟಾಗದಂತೆ ಸ್ಥಿತಿ ಇರಬೇಕು. ಏಕಾಗ್ರತೆಗೆ ತನ್ನದೇ ಆದ ಬೆಲೆ ಇದೆ. ಆದರೆ 24 ಗಂಟೆಯು ಅಗತ್ಯವಾಗಿರುವ ವಸ್ತು ಅದು ಸಾವಧಾನತೆ. ನಮ್ಮ ಮೇಲೆ ಧಾಳಿಯಾಗಬಾರದು, ನಾವು ಭ್ರಮಿತರಾಗಬಾರದು ಇದು ಎಚ್ಚರಿಕೆಯ ಸ್ಥಿತಿ.

(ಮುಂದುವರಿಯುವುದು)

ಜನಪದ ವಿಚಾರ

- ನಿಮಗಿಷ್ಟವಾದರೆ ನಿಮ್ಮ ಮಿತ್ರರಿಗೂ ಚಂದಾದಾರರಾಗಲು ತಿಳಿಸಿ
- ವಾರ್ಷಿಕ ಚಂದಾ ಜುಲೈ ೧೯೯೦ ರಿಂದ ೨೫ ರೂ.
- ಪತ್ರಿಕೆ ತಲುಪದಿದ್ದರೆ, ನಿಮ್ಮ ವಿಳಾಸ ಬದಲಾದರೆ ನಮಗೆ ತಿಳಿಸಿ,
- ಲೇಖನಗಳನ್ನು ಕಳುಹಿಸಿ.

ಸಾಮಾಜಿಕ, ಆರ್ಥಿಕ ವಿಶ್ಲೇಷಣೆಗಳ ಅಧ್ಯಯನ ವರದಿಗಳಿಗೂ ಸ್ವಾಗತ.

ನಮ್ಮ ವಿಳಾಸ :- ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್,

ಮೇಲುಕೋಟೆ- 571431

ಕರ್ನಾಟಕ.

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯ ಒಂದು ಪರಿಚಯ

ಮೂಲ : ಮಸನೋಬು ಫುಕುವೋಕಾ ಕನ್ನಡಾನುವಾದ : ಸಂತೋಷ್ ಕೌಲಗಿ ಬೆಲೆ : 15 ರೂ

ಮನುಕುಲ ವಿನಾಶ : ಬಾಂಬ್ ಬೇಕಿಲ್ಲ, ಅಣುಸ್ಥಾವರ ಸಾಕು

ಡಾ॥ ಎ. ಎನ್. ನಾಗರಾಜ್

ಬೆಲೆ : 2-00 ರೂ.

ಕಾವ್ಯಸುಧಾ ಎ. ಎಸ್. ನರಸಿಂಹಮೂರ್ತಿ

ಬೆಲೆ : 12-00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

ಬೆಲೆ : 5-00 ರೂ.

KRNM 44

RAMAKRISHNAYYA. K.P.
...NARALU, MADDUR Tq.
...YA Dt.

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ